ಗೋರಖನಾಥ್

ಲಿಂಗರಾಜು



ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಾಮಾಜಿಕ ಚಿಂತನಮಾಲೆ

ಗೋರಖನಾಥ್

ಲಿಂಗರಾಜು

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು ೫೬೦೦೦೨

GORAKHANATH—Written by Lingaraju
and Published by Karnataka Sahitya Akademy,
Nrupatunga Road, Bangalore-560002.

First Publication 1994 Pages : viii + 56

ಮೊದಲನೇ ಮುದ್ರಣ ೧೯೯೪

ನೆರವು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪ್ರಧಾನ ಸಂಪಾದಕರು :

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು :

ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ರಕ್ಷಾಪುಟ ವಿನ್ಯಾಸ :

ಸಿ. ಚಂದ್ರಶೇಖರ್

ಬೆಲೆ : ನಾಲ್ಕು ರೂಪಾಯಿ

ಮುದ್ರಕರು :

ರಶ್ಮಿ ಮುದ್ರಣ
ನಂ. ೧೯, ೫ನೇ ಕ್ರಾಸ್, ಸುಧಾಮನಗರ, ಬೆಂಗಳೂರು–೫೬೦ ೦೨೭

ಅಧ್ಯಕ್ಷರ ಮಾತು

ಸಮಾಜದಲ್ಲಿ ಸಮಾನತೆ, ಸಾಮರಸ್ಯಗಳು ನೆಲೆಯೂರಬೇಕೆಂಬ ಆಶಯಕ್ಕೆ ಒಂದು ಇತಿಹಾಸವಿದೆ. ವಿವಿಧ ಕಾಲಘಟ್ಟಗಳಲ್ಲಿ ಬದುಕನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸಿದ ಚೇತನಗಳು, ಆರೋಗ್ಯಕರ ಚಲನಶೀಲತೆಗೆ ಒತ್ತಾಸೆಯಾಗಿವೆ. ಇದು ಹೊಸ ಬೆಳಕನ್ನು ಹುಡುಕುವ ಒಂದು ಹೋರಾಟ ; ಅಂತೆಯೇ ಇರುವ ಬೆಳಕನ್ನು ಕಾಯ್ದುಕೊಳ್ಳುವ ವಿಶಿಷ್ಟ ಕಾಳಜಿ. ಅದೇ ಸಂದರ್ಭದಲ್ಲಿ ಹಗಲಲ್ಲೇ ಕತ್ತಲು ಮೂಡಿಸುವ ಕರಾಳ ಪ್ರಯತ್ನಗಳಿಗೇನೂ ಕಡಿಮೆಯಿಲ್ಲ. ಬೆಳಕಿನ ಕಿರಣಗಳನ್ನು ಕತ್ತಲ ಕೋಣೆಯಲ್ಲಿ ಕೂಡಿ ಹಾಕುವ ಇಂಥ ಸ್ವಾರ್ಥ ಶಕ್ತಿಗಳಿಗೂ, ಚಲನಶೀಲಪರವಾದ ಚೇತನಗಳಿಗೂ ಮುಖಾಮುಖಿ ಅನಿವಾರ್ಯ. ವ್ಯಕ್ತಿ ಮತ್ತು ಸಂದರ್ಭಗಳಿಗನುಗುಣವಾಗಿ ಮುಖಾಮುಖಿಯ ಸ್ವರೂಪದಲ್ಲಿ ವ್ಯತ್ಯಾಸಗಳಿರಬಹುದು ; ಕಾರ್ಯಕ್ಷೇತ್ರಗಳಲ್ಲಿ ವಿಭಿನ್ನತೆಯಿರಬಹುದು. ಆದರೆ ಆಯಾ ನೆಲೆಯಲ್ಲಿ ಜಡತೆಯನ್ನು ಮೀರುವ ಮನೋಧರ್ಮ ಮುಖ್ಯವಾಗುವ ಮುಖಾಮುಖಿಯು ಮಹತ್ವದ್ದೇ ಆಗಿರುತ್ತದೆ.

ಸಾಮಾಜಿಕ ಸನ್ನಿವೇಶವೊಂದು ಉಂಟುಮಾಡುವ ಸೈದ್ಧಾಂತಿಕ ಮುಖಾಮುಖಿ ಮತ್ತು ಅದರ ಫಲಿತಗಳು ಇದ್ದಕ್ಕಿದ್ದಂತೆ ಸಂಭವಿಸುವುದಿಲ್ಲ. ಇದಕ್ಕೂ ಒಂದು ಚರಿತ್ರೆಯಿರುತ್ತದೆ. ಆದ್ದರಿಂದ ಚಾರಿತ್ರಿಕತೆಯನ್ನು ಪರಿಗಣಿಸಿಯೇ ನಾವು ಸಾಮಾಜಿಕ ಚಿಂತನೆಯನ್ನು ಪರಿಶೀಲಿಸುವುದು ಆರೋಗ್ಯಕರವಾದುದು. ನಿರ್ದಿಷ್ಟ ಕಾಲದ ಚಲನಶೀಲ ಚಿಂತನೆ ಸಮಕಾಲೀನ ಸಂದರ್ಭದಲ್ಲಿ ಹಳೆಯದಾಗಬಹುದಾದರೂ,

ಸಮಕಾಲೀನ ಸಂದರ್ಭದ ಹೊಸ ಚಿಂತನೆಗಳಿಗೆ ಚಾರಿತ್ರಿಕ ಒತ್ತಾಸೆಯನ್ನೂ, ಪ್ರಗತಿಪರ ಪರಂಪರೆಯನ್ನೂ ಅದು ಒದಗಿಸಿರುತ್ತದೆಯೆಂಬುದನ್ನು ನಾವು ಮರೆಯಲಾಗದು. ಆಯಾ ಚಾರಿತ್ರಿಕ ಸಂದರ್ಭವನ್ನು ಪರಿಗಣಿಸಿಯೇ ಸಮಕಾಲೀನ ವಿವೇಕದ ಮೂಲಕ ಎಲ್ಲ ಕಾಗದ ಚಿಂತನೆಗಳನ್ನು ತೂಗಿ ನೋಡುವುದರಿಂದ ಆತುರದ, ಅತಿರೇಕದ ತೀರ್ಪುಗಳಿಂದ ನಾವು ಪಾರಾಗುತ್ತೇವೆ. ಸರಿದಾರಿಯಲ್ಲಿ ಹೆಜ್ಜೆಯಿಡುತ್ತೇವೆ. ಆಯಾ ಕಾಲದ ಸಾಮಾಜಿಕ ಚಿಂತನೆಗಳ ಚಲನಶೀಲತೆಯನ್ನು ಮೆಚ್ಚುತ್ತ, ಮಿತಿಗಳನ್ನು ಗುರುತಿಸಿ ಮೀರುತ್ತಾ, ಹೊಸ ಮನೋಧರ್ಮವನ್ನು ರೂಪಿಸಿಕೊಳ್ಳುವುದು, ಚಿಂತನೆಗೆ ಹೊಸ ಆಯಾಮಗಳನ್ನು ಕಂಡುಕೊಳ್ಳುವುದು ಸಮಕಾಲೀನತೆಯ ಸತ್ವವಾಗಬಲ್ಲದು.

ಒಟ್ಟು ವಿಶ್ವದಲ್ಲಿ ಭಕ್ತರು, ಸಂತರು, ಸಮಾಜ ಸೇವಕರು, ರಾಜಕಾರಣಿಗಳು, ವಿಜ್ಞಾನಿಗಳು, ಕವಿ–ಕಲಾವಿದರು, ಕ್ರಾಂತಿಕಾರಿಗಳು –ಹೀಗೆ ವಿವಿಧ ನೆಲೆಗಳಲ್ಲಿ ಬದುಕನ್ನು ಕಂಡುಕೊಳ್ಳುವ ಮತ್ತು ಕಟ್ಟುವ ಕ್ರಿಯಾಶೀಲತೆ ತೋರಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಚಿಂತಕರೇ ಆಗಿದ್ದಾರೆ. ಇವರ ನಂಬಿಕೆ, ನಿಲುವು ಮತ್ತು ಮಾರ್ಗಗಳು ಬೇರೆ ಬೇರೆಯಿರಬಹುದು. ಆದರೆ ತಂತಮ್ಮ ಕಾರ್ಯಕ್ಷೇತ್ರದ ಚೌಕಟ್ಟಿನಲ್ಲಿ ಯಥಾಸ್ಥಿತಿಯನ್ನು ಮೀರುತ್ತ, ಮುಂದೆ ಜಡ ಚೌಕಟ್ಟುಗಳನ್ನು ಛಿದ್ರಮಾಡಿ ಹೊಸ ಹಾದಿ ಹುಡುಕುವುದಕ್ಕೆ, ಹೊಸ ಚಿತ್ರ ಬರೆದು ಹೊಸ ಚೌಕಟ್ಟು ನಿರ್ಮಿಸುವುದಕ್ಕೆ ಪ್ರೇರಣೆಯಾಗಿರುವುದಂತೂ ನಿಜ. ಪರಸ್ಪರ ವಿರುದ್ಧ ನೆಲೆಗಳಿಗೆ ಸೇರಿದ ಇವರು ತಮ್ಮೆಲ್ಲ ಮಿತಿ ಮತ್ತು ವ್ಯಾಪ್ತಿಯೊಂದಿಗೆ ಚಾರಿತ್ರಿಕ ಮಹತ್ವ ಪಡೆಯುತ್ತಾರೆ. ಯಾಕೆಂದರೆ ಸಾಮಾಜಿಕ ಚಿಂತಕರು ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿರಲಿ, ಯಾವುದೇ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿ, ಅವರವರ ಸಂದರ್ಭದಲ್ಲಿ ಮೂಲಭೂತವಾದಿ ಮನೋಧರ್ಮವನ್ನು ಪಡೆದಿರುವುದಿಲ್ಲ ; ಜಡಜೈಲುಗಳನ್ನು ನಿರ್ಮಿಸುವುದಿಲ್ಲ ; ಅಸಮಾನತೆಯನ್ನು

ಒಪ್ಪುವುದಿಲ್ಲ; ಅವಮಾನವೀಯತೆಯನ್ನು ಘೋಷಿಸುವುದಿಲ್ಲ. ಆದರ ಆದ್ಯತೆಗಳಲ್ಲಿ ಅಂತರವಿರಬಹುದು; ಚಿಂತನೆಯಲ್ಲಿ ವೈರಂಧ್ಯಗಳಿರಬಹುದು. ಒಟ್ಟಾರೆ ಒಂದಷ್ಟು ಮರುಚಿಂತನೆಗೆ ಒತ್ತಾಸೆಯಾಗಿ ತಾವು ಬದುಕಿದ ಪರಿಸರಕ್ಕೆ ಮಾನವೀಯ ಮಿಡಿತ ತರುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿರುತ್ತಾರೆ.

ಮೇಲೆ ವಿವರಿಸಿದ ವಿಶಾಲ ವ್ಯಾಪ್ತಿಯ ಹಿನ್ನೆಲೆಯಲ್ಲಿ 'ಸಾಮಾಜಿಕ ಚಿಂತನ ಮಾಲೆ'ಯನ್ನು ರೂಪಿಸಲಾಗಿದೆ. ಕನ್ನಡದ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡಿರುವ ಈ ಮಾಲೆಯ ಪುಸ್ತಕಗಳು ಏಕಕಾಲಕ್ಕೆ ಪರಿಚಯಾತ್ಮಕವೂ, ಚಿಂತನಾತ್ಮಕವೂ ಆಗಿರಬೇಕೆಂದು ಅಪೇಕ್ಷಿಸಲಾಗಿದೆ. ಒಟ್ಟಿನಲ್ಲಿ ಇದು, ಸಾಮಾನ್ಯ ಓದುಗರು ಸಾಮಾಜಿಕ ಚಿಂತನೆಯ ವಿವಿಧ ವಿನ್ಯಾಸಗಳನ್ನು ಅರಿವಿಗೆ ತಂದುಕೊಂಡು ಹೆಚ್ಚಿನ ಓದಿಗೆ ಆಸಕ್ತರಾಗುವಂತೆ ಮಾಡುವ ಒಂದು ವಿನಯಪೂರ್ವಕ ಪ್ರಯತ್ನವಾಗಿದೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ಹೇಳಲೇಬೇಕು. ಸಾಮಾಜಿಕ ಚಿಂತನ ಮಾಲೆಯು ಈ ರೂಪವನ್ನು ಪಡೆಯುವುದಕ್ಕೆ, ಮೊದಲ ಪ್ರೇರಣೆ ಒದಗಿಸಿದವರು ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀ ಎಚ್. ವಿಶ್ವನಾಥ್ ಅವರು. ಶ್ರೀ ವಿಶ್ವನಾಥ್ ಅವರಿಗೆ ಕೆಲವು ಸಮಾಜ ಸುಧಾರಕರ ಬಗ್ಗೆ ಕಿರು ಪುಸ್ತಕಗಳನ್ನು ಅಚ್ಚು ಮಾಡಿಸಿ ಕಡಿಮೆ ಬೆಲೆಗೆ ಒದಗಿಸಬೇಕೆಂಬ ಮಹದಾಕಾಂಕ್ಷೆಯಿತ್ತು. ಈ ಕೆಲಸವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿ ಯೋಜನೆಯೊಂದನ್ನು ಸಿದ್ಧಪಡಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ನೀಡಿದ್ದಲ್ಲದೆ, ಈ ಯೋಜನೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ವಿಶೇಷ ಅನುದಾನವನ್ನು ಮಂಜೂರು ಮಾಡಿದರು. ಶ್ರೀ ವಿಶ್ವನಾಥ್ ಅವರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಇದೇ ಸಂದರ್ಭದಲ್ಲಿ, ಸಹಕಾರವನ್ನು ಮುಂದುವರೆಸಿದ ಇಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಆರ್. ಎನ್. ನಾಯಕ್ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೂ ಕಾರ್ಯದರ್ಶಿಗಳಿಗೂ ಧನ್ಯವಾದಗಳು.

ಸಾಮಾಜಿಕ ಚಿಂತನ ಮಾಲೆಯ ಪುಸ್ತಕಗಳನ್ನು ಬರೆದುಕೊಟ್ಟ ವಿವಿಧ ಲೇಖಕರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತ ಕನ್ನಡ ಓದುಗರು ಈ ಪುಸ್ತಕಗಳನ್ನು ಓದಿ ಅಕಾಡೆಮಿಯ ಆಶಯವನ್ನು ಸಾರ್ಥಕ ಗೊಳಿಸಬೇಕೆಂದು ವಿನಂತಿಸುತ್ತೇನೆ.

ಅಕ್ಟೋಬರ್ ೧೯೯೪
ಬೆಂಗಳೂರು

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು

ಲೇಖಕರ ಮಾತು

ಗೋರಖನಾಥನನ್ನು ಕುರಿತು ನನ್ನ ತಿಳಿವಿನಂತೆ ಕನ್ನಡದಲ್ಲಿ ಇದು ಮೊದಲ ಬರಹ. ಹಲವು ಕೃತಿಗಳಲ್ಲಿ ಸಾಂದರ್ಭಿಕವಾಗಿ ಗೋರಖನಾಥ ಉಲ್ಲೇಖಗೊಂಡಿದ್ದರೂ ಈತನನ್ನೇ ಕೇಂದ್ರವಾಗಿ ಇರಿಸಿಕೊಂಡ ಕೃತಿ ಈವರೆಗೆ ಕನ್ನಡದ ಮಟ್ಟಿಗೆ ಬಂದಿಲ್ಲ. ಬುದ್ಧನ ನಂತರ ಈ ದೇಶದ ಸಾಂಸ್ಕೃತಿಕ ನೆಲೆಗಟ್ಟನ್ನೇ ಅಲುಗಿಸಿ ಸಾಮಾಜಿಕ ಪರಿವರ್ತನೆಗೆ ಹೊಸ ದಿಕ್ಕನ್ನು ತಂದ ನಾಥಪಂಥದಲ್ಲಿ ಗೋರಖನಾಥನದು ಪ್ರಮುಖ ಪಾತ್ರವಾಗಿದೆ. ಐತಿಹಾಸಿಕ ವಿವರಕ್ಕೆ ದೂರವಾದ ಈತನ ಜೀವಿತದ ಕಿರುರೇಖೆಯೊಂದಿಗೆ ಆತನ ಚಿಂತನೆಯ ಕೆಲವು ನುಡಿಗಳನ್ನು ಇಲ್ಲಿ ಕನ್ನಡಿಕರಿಸಲಾಗಿದೆ. ಸಾಮಾನ್ಯ ಓದಿಗಾಗಿ ರಚಿತಗೊಂಡಿರುವ ಈ ಪರಿಚಯಾತ್ಮಕ ಬರಹವನ್ನು ಅಡಿಟಿಪ್ಪಣಿ ಮತ್ತಿತರ ವಿವರಗಳಿಂದ ಮುಕ್ತಗೊಳಿಸಲಾಗಿದೆ. ಈ ಕೃತಿಯ ಓದು ಗೋರಖನಾಥನನ್ನು ಕುರಿತ ಹೆಚ್ಚಿನ ಓದಿಗೆ ಪ್ರೇರಣೆ ನೀಡಿದರೆ ಈ ಬರಹ ಸಾರ್ಥಕಗೊಂಡಿತು ಎಂಬ ನಿವೇದನೆಯನ್ನು ಈ ಕೃತಿಯ ಓದುಗರಿಗೆ ಸೂಚಿಸುತ್ತೇನೆ.

ಇಂಥದೊಂದು ಬರಹವನ್ನು ನನ್ನಿಂದ ಬರೆಸಲು ಕಾರಣಕರ್ತರಾದ ಬರಗೂರು ರಾಮಚಂದ್ರಪ್ಪನವರಿಗೆ ; ನನ್ನಿಂದ ಈ ಕೃತಿರಚನೆ ಸಾಧ್ಯವಿದೆಯೇ ಎಂಬ ತೊಳಲಾಟದಲ್ಲಿದ್ದಾಗ ನಾನು ಬರೆಯಬಲ್ಲೆ ಎಂಬ ವಿಶ್ವಾಸವನ್ನು ನನಗಿಂತ ಮೊದಲೇ ತಮ್ಮಲ್ಲಿ ತುಂಬಿಕೊಂಡು

ಒಂದಿಷ್ಟು ಆಕರಗಳನ್ನು ಆರಂಭಿಕ ಹಂತದಲ್ಲಿಯೇ ಒದಗಿಸಿದ ಮಲ್ಲೇಪುರಂ ಜಿ. ವೆಂಕಟೇಶ್ ಅವರಿಗೆ ; ಕೆಲವು ಅಲಭ್ಯ ಕೃತಿಗಳನ್ನು ರಚನೆಯ ಸಂದರ್ಭದಲ್ಲಿ ಒದಗಿಸಿದ ಷಣ್ಮುಖಯ್ಯ ಅಕ್ಕೂರಮಠ ಅವರಿಗೆ; 'ಸಿದ್ಧಸಿದ್ಧಾಂತ ಪದ್ಧತಿ'ಯ ತಮ್ಮ ಕೈಬರಹದ ಪ್ರತಿಯನ್ನು ಕಳಿಸಿ ಕೆಲವೇ ಮಾತುಗಳಲ್ಲಿ ಒಂದಿಷ್ಟು ಹೊಳಹುಗಳನ್ನು ನೀಡಿದ ಶಂಕರ ಮೊಖಾಶಿ ಪುಣೇಕರ ಅವರಿಗೆ; ಹಸ್ತಪ್ರತಿ ಓದಿ ಸಲಹೆಯಿತ್ತ ಎಲ್. ಹನುಮಂತಯ್ಯ ಅವರಿಗೆ; ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿರುವ ಇನ್ನೂ ಹಲವು ಆತ್ಮೀಯರಿಗೆ; ಅಕಾಡೆಮಿಯ ಸಿಬ್ಬಂದಿ ಮತ್ತು ರಿಜಿಸ್ಟ್ರಾರ್ ಆಗಿದ್ದ ಬಿ. ಎನ್. ಸತ್ಯನಾರಾಯಣರಾವ್ ಅವರಿಗೆ; ಮಾತಿಗೆ ಮೀರಿದ ಸಂಬಂಧದಲ್ಲಿ ಈ ಕೃತಿ ರಚನೆಗೆ ಮೊದಲಿನಿಂದಲೂ ಪ್ರೇರಣೆ ನೀಡಿರುವ ಶಿವಪ್ರಕಾಶಕರಿಗೆ ಮತ್ತು ಈ ಕೃತಿಯ ಓದಿನಲ್ಲಿ ಈ ಬರಹಕ್ಕೆ ಒಂದು ಸಾರ್ಥಕ ನೆಲೆ ಕಲ್ಪಿಸಿರುವ ಓದುಗರಾದ ನಿಮಗೆ—ಹೃತ್ಪೂರ್ವಕವಾದ ವಂದನೆಗಳು.

ಲಿಂಗರಾಜು

ಗೋರಖನಾಥ

ಅಧ್ಯಾಯ–೧

ಪ್ರವೇಶ

ಒಂದು : ಇತಿಹಾಸದತ್ತ ಒಂದು ಕಣ್ಣೋಟ

ಗೋರಖನಾಥ ಎನ್ನುವುದು ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ದೇಶದ ಉದ್ದಗಲಕ್ಕೂ ಒಂದು ಹೊಸ ಅಲೆಯನ್ನು ಹಬ್ಬಿಸಲು ಕಾರಣವಾದ ನಾಥಪಂಥದಲ್ಲಿ ಕೇಂದ್ರ ವ್ಯಕ್ತಿತ್ವವನ್ನು ಪಡೆದ ಒಂದು ಅಪೂರ್ವ ಜೀವಿತದ ಹೆಸರು. ಈ ಗೋರಖನಾಥನಿಗೆ ಗೋರಖ, ಗೋರಕ್ಷ ಮತ್ತು ಗೋರಕ್ಷನಾಥ ಎಂದೂ ಕರೆಯಲಾಗುತ್ತಿದೆ. ಗೋರಖನಾಥ ಮತ್ತು ಗೋರಖ ಎಂಬುದರ ಸಂಸ್ಕೃತ ರೂಪವೇ ಗೋರಕ್ಷನಾಥ ಮತ್ತು ಗೋರಕ್ಷ ಎಂದಾಗಿದೆ. ಈತನದು ಸಾಂಸ್ಕೃತಿಕ ವ್ಯಕ್ತಿತ್ವ. ಸಂಸ್ಕೃತಿಯ ನೆಲಗಟ್ಟಿಗೇ ಇಳಿದು ನಿಲ್ಲುವಂಥ ಬಾಳನ್ನು ತಮ್ಮ ಜೀವಿತದಲ್ಲಿ ರೂಪಿಸಿಕೊಂಡಿರುವವರು ಇತಿಹಾಸದಲ್ಲಿ ಬೆರಳೆಣಿಕೆಯಷ್ಟು ಮಾತ್ರವಿದ್ದಾರೆ.

ಇತಿಹಾಸ ಎಂದು ಈವರೆಗೆ ಹೆಚ್ಚು ಚಾಲ್ತಿಯಲ್ಲಿ ಇರುವುದು ರಾಜಕೀಯ ನೆಲೆಯನ್ನೇ ಪ್ರಧಾನವಾಗಿ ಇರಿಸಿಕೊಂಡಿರುವಂತಹುದು. ಈ ರಾಜಕೀಯ ನೆಲೆಯ ಇತಿಹಾಸದೊಂದಿಗೆ ಈವರೆಗೆ ಇತಿಹಾಸ ಬರೆದಿರುವವರ ಇತಿಹಾಸಗಳಲ್ಲಿ ಧಾರ್ಮಿಕ ನೆಲೆಯ ಎಳೆಗಳೂ ಅಲ್ಲಲ್ಲಿ ಕೂಡಿಕೊಂಡಿವೆ. ಆದರೆ ಮಾನವ ಬದುಕು ಬರಿಯ ರಾಜಕೀಯ

ಅಥವಾ ಧಾರ್ಮಿಕ ನೆಲೆಗಳನ್ನಷ್ಟೇ ಆಧರಿಸಿಕೊಳ್ಳುತ್ತ ಬಂದಿಲ್ಲ. ಈ ಎರಡೂ ನೆಲೆಗಳ ಹಿಂದೆ ಮಾನವ ಬದುಕಿನೊಂದಿಗೆ ಅಂತರ್ಗತವಾಗಿ ರುವ ಸಾಂಸ್ಕೃತಿಕ ನೆಲೆಯೂ ಇದೆ. ಧರ್ಮ ಮತ್ತು ರಾಜಕೀಯಗಳು ಒಂದು ಆಕಾರದಲ್ಲಿ ರೂಪುಗೊಳ್ಳುವುದಕ್ಕೂ ಹಿಂದೆಯೇ ಸಂಸ್ಕೃತಿಯು ಬೇರುಗಳು ಆಳಕ್ಕೆ ಇಳಿದುಕೊಂಡಿವೆ. 'ಇತಿಹಾಸ' ಎಂದು ಈಗ ಸ್ವೀಕೃತಗೊಂಡು ಬಳಕೆಗೊಳ್ಳುತ್ತಿರುವುದು ಸಂಸ್ಕೃತಿಯ ನೆಲೆಯನ್ನೇ ಲಕ್ಷ್ಯಕ್ಕೆ ತೆಗೆದುಕೊಳ್ಳದಂತೆ ಇತಿಹಾಸದ ಅವಲೋಕನವನ್ನು ನಡೆಸು ತ್ತಿರುವಂಥಹುದು. ಹೀಗಾಗಿಯೇ ಸಂಸ್ಕೃತಿಯ ನೆಲೆಯಲ್ಲಿನ ಗೋರಖ ನಾಥನಂಥವನು ತೆರೆಯಮರೆಗೆ ಸರಿದುಕೊಂಡು ಕೆಲವರ ಕುತೂಹಲದ ವ್ಯಕ್ತಿಯಾಗಿ ಮಾತ್ರ ತನ್ನ ಕಾಲದಲ್ಲಿನ ತನ್ನ ಪಾತ್ರವನ್ನು ತೋರ ದಂತಾಗಿದ್ದಾನೆ.

'ಆಧುನಿಕತೆ'ಯ ಪಾಶ್ಚಾತ್ಯ ನೋಟದಿಂದ ಹೊರಗುಳಿದು ಈ ದೇಶದ ಇತಿಹಾಸವನ್ನು ಒಟ್ಟಾಗಿ ಗ್ರಹಿಸಲು ನೋಡಿದಾಗ ಸಂಸ್ಕೃತಿ-ಧರ್ಮ-ರಾಜಕೀಯದ ಮೂರು ನೆಲೆಗಳು ಮುಖ್ಯವಾಗಿ ಕಾಣುತ್ತವೆ. ಈ ಮೂರು ನೆಲೆಗಳು ಮೇಲು ನೋಟಕ್ಕೆ ಬೇರೆ ಬೇರೆ ಎಂಬಂತೆ ತೋರಿಕೊಂಡರೂ ಈ ಮೂರರ ಹೆಣಿಗೆಗಳೂ ಒಂದಕ್ಕೊಂದು ಹೆಣೆದು ಕೊಳ್ಳುತ್ತ ಕಾಲಾಂತರದುದ್ದಕ್ಕೂ ಸಾಗಿ ಬರುತ್ತಿರುವುದನ್ನು ಕಾಣ ಬಹುದು. ಇಂದಿನ ಸಮಕಾಲೀನ ಬದುಕಿನಲ್ಲಿಯೂ ಸಮಸ್ಯೆಗಳನ್ನು ಹುಟ್ಟುಹಾಕುತ್ತಿರುವ ಈ ಮೂರೂ ನೆಲೆಗಳಿಗೆ ಇವುಗಳದ್ದೇ ಆದ ಹಿನ್ನೆಲೆ ಮತ್ತು ಕಾರಣಗಳು ಇರುವುದು ಸೂಕ್ಷ್ಮನೋಟಕ್ಕೆ ನಿಲುಕು ತ್ತದೆ. ಇಂದಿನ ಸಾಮಾಜಿಕ ಬದುಕಿನಲ್ಲಿ ಮೂಡಿಕೊಳ್ಳುತ್ತಿರುವ ಬಿಕ್ಕಟ್ಟಿನಂತಹ ಪರಿಸ್ಥಿತಿ ಕಾಲಕಾಲಕ್ಕೆ ಈ ಹಿಂದೆಯೂ ಮೂಡಿ ಕೊಂಡಿದೆ ಎನ್ನುವುದನ್ನು ಇತಿಹಾಸದ ಹಲವು ಕಾಲಘಟ್ಟಗಳು ತೋರಿ ಕೊಳ್ಳುತ್ತವೆ.

ಗೋರಖನಾಥನ ಜೀವಿತಾವಧಿಯ ಸಂದರ್ಭದಲ್ಲಿಯೂ ಇಂದು

ಸಾಮಾಜಿಕ ಬದುಕು ಎದುರಿಸುತ್ತಿರುವ ಸಮಸ್ಯೆಗಳಂಥ ಹಲವು ಸಮಸ್ಯೆಗಳು ಸೃಷ್ಟಿಗೊಂಡಿದ್ದವು. ಈತ ಈ ಸಮಸ್ಯೆಗಳನ್ನು ಹೇಗೆ ಎದುರಿಸಿದ ಎನ್ನುವುದನ್ನು ಮುಂದಿನ ಪುಟಗಳಲ್ಲಿ ಅವಲೋಕಿಸುವ ಮೊದಲು ಈ ನಾಡಿನ ಬದುಕಿನ ಮೂಲನೆಲೆಗಳತ್ತ ಒಂದು ಕಣ್ಣೋಟ ಹರಿಸುವುದು ಅಗತ್ಯವಿದೆ.

ಭಾರತೀಯ ಬದುಕಿನ ಸಾಂಸ್ಕೃತಿಕ ನೆಲೆ ಎಂದು ಈವರೆಗೆ ಹೆಚ್ಚು ಪ್ರಸಿದ್ಧಿ ಪಡೆದಿರುವುದು ವೇದೋಪನಿಷತ್ತುಗಳನ್ನು ಆಧರಿಸಿದ ಧಾರ್ಮಿಕ ನೆಲೆಗಟ್ಟಿನ ತತ್ವಗಳನ್ನು ಒಳಗೊಂಡಿರುವಂತಹದು. ವೇದೋಪನಿಷತ್ತುಗಳಿಗೆ ಹೊರತಾಗಿ ನಿಲ್ಲುವ ಇತರೆ ತಾತ್ವಿಕಾಂಶಗಳ ನೆಲೆಗಟ್ಟುಗಳು ಇಲ್ಲವೇ ಇಲ್ಲವೇನೋ ಎಂಬಂತೆ ಇನ್ನೂ ಮರೆಯಲ್ಲಿಯೇ ಇವೆ. ಇತಿಹಾಸವನ್ನು ಹೊಸಕಣ್ಣಿನಿಂದ ನೋಡುತ್ತಿರುವ ಕೆಲವು ವಿದ್ವಾಂಸರು ಸಂಸ್ಕೃತ ಭಾಷೆಯನ್ನು ಆಧರಿಸಿದ ವೇದೋಪನಿಷತ್ತುಗಳ ಪರಂಪರೆಗೆ ಹೊರತಾಗಿ ಗ್ರಾಮೀಣ ಜನಪದದ ಸಂಸ್ಕೃತಿಯೊಂದನ್ನು ಗುರುತಿಸಿರುವಂತೆಯೇ, ಈ ಎರಡರ ಮಧ್ಯದಲ್ಲಿ ನಿಲ್ಲುವ ಮತ್ತೊಂದು ನೆಲೆಯನ್ನು ಕಾಣಿಸುತ್ತಿದ್ದಾರೆ. ಗ್ರಾಮೀಣ ಜನಪದರಲ್ಲಿ ಗಂಡು ದೈವದ ಆರಾಧನಾ ಪರಂಪರೆ ಇರುವಂತೆಯೇ, ಹೆಣ್ಣು ದೈವದ ಆರಾಧನಾ ಪರಂಪರೆಯೂ ಬಹಳಕಾಲದ ಹಿಂದಿನಿಂದಲೇ ಇರುವುದರ ಕುರುಹುಗಳು ಸ್ಪಷ್ಟಗೊಳ್ಳುತ್ತ ಸಾಂಸ್ಕೃತಿಕ ಎಳೆಗಳನ್ನು ತೆರೆಸುತ್ತಿವೆ. ಕಾಡನ್ನು ಆಧರಿಸಿದ ಅಲೆಮಾರಿಗಳಲ್ಲಿ ಶಕ್ತಿಯನ್ನು ಹಲವು ವಿಧದಲ್ಲಿ ಆರಾಧಿಸುವ ರೂಢಿಯೂ ಸಂಸ್ಕೃತ ಭಾಷೆಗೆ ಹೊರತಾಗಿ ನಿಲ್ಲುವ ರೂಪ ಭೇದಗಳಲ್ಲಿ ಸಾಗಿ ಬಂದ ತನ್ನ ಕುರುಹುಗಳನ್ನು ತೋರಿಕೊಳ್ಳುತ್ತಿದೆ. ಇವುಗಳಲ್ಲಿ ಹಲವು ಸದಾ ಮೇಲು ಸ್ಥಾನವನ್ನೇ ಕಾಯ್ದುಕೊಳ್ಳುತ್ತ ಬರುತ್ತಿರುವ ವೇದೋಪನಿಷತ್ತಿನ ನೆಲೆಗಟ್ಟಿನ ಆರ್ಯ ತತ್ವಗಳ ಪ್ರಭಾವಕ್ಕೆ ಒಳಗಾಗಿ ಆರ್ಯೀಕರಣದಲ್ಲಿ ತನ್ನ ಕುರುಹುಗಳನ್ನು ಮಸುಕುಗೊಳಿಸಿಕೊಂಡಿರುವುದೂ ಇದೆ. ಸಾಂಸ್ಕೃತಿಕ ವಿಭಿನ್ನತೆಯನ್ನು ಹೊಂದಿದ್ದ

ವೈವಿಧ್ಯಪೂರ್ಣತೆಯು ಬದುಕು ಈ ನಾಡಿನಲ್ಲಿ ಹೇಗೆ ಹರಿದುಬಂದಿದೆ ಎಂಬುದರ ಕಿರುಚಿತ್ರವನ್ನು ಕಂಡುಕೊಳ್ಳಲು ಇಂದು ಭಾರತ ಅಥವಾ ಇಂಡಿಯಾ ಎಂದು ಭಾಷಾವಾರು ಪ್ರಾಂತ್ಯಗಳಾಗಿ ವಿಂಗಡಣೆಗೊಂಡಿರುವ ನಾಡನ್ನೆಲ್ಲಾ ಒಟ್ಟುಗೂಡಿಸಿಕೊಂಡ. ಈ ನಾಡಿನ ಹೊರದೇಶಗಳಾಗಿ ಇಂದು ತಮ್ಮ ಸ್ಥಾನವನ್ನು ಪಡೆದುಕೊಂಡಿರುವ ಪಾಕಿಸ್ತಾನ, ನೇಪಾಳ, ಬಾಂಗ್ಲಾದೇಶ, ಭೂತಾನ ಮತ್ತು ಶ್ರೀಲಂಕಾ ದ್ವೀಪವನ್ನು ಒಳಗೊಂಡ ಭರತಖಂಡ ಎಂಬ ಚಿತ್ರದೊಂದಿಗೆ ನೋಡಬೇಕಿದೆ. ಇಂಥ ಒಟ್ಟು ನೋಟದಲ್ಲಿ ನೋಡಿದಾಗ ಮಾತ್ರ ಈ ನಾಡಿನ ಇತಿಹಾಸಕ್ಕೆ ಸ್ಪಷ್ಟವಾದ ಒಂದು ಹೊಸ ರೂಪವನ್ನು ಕೊಟ್ಟುಕೊಳ್ಳುತ್ತ ಇಲ್ಲಿನ ಸಾಂಸ್ಕೃತಿಕ ನೆಲೆಯನ್ನು ಅರಿಯಲು ಸಾಧ್ಯವಾಗುತ್ತದೆ.

ದೇಶಭಾಷೆಗಳ ಗೋಜಲುಗಳಿಂದ ಹೊರತಾದ ಪಂಗಡಗಳು ಈ ನಾಡಿನ ನೆಲದಲ್ಲಿ ತಮ್ಮ ನೆಲೆಗಳನ್ನು ಒಳಗೊಂಡಿದ್ದರ ಕುರುಹುಗಳು ಇತಿಹಾಸ ಪೂರ್ವದತ್ತ ಕಣ್ಣೋಟ ಹರಿಸಿದಾಗಲೂ ಕಾಣುತ್ತಿರುವಂತೆಯೇ ನಾಡಿನ ಉದ್ದಗಲಕ್ಕೂ ಹರಡಿಕೊಂಡಿರುವ ಪ್ರಾದೇಶಿಕ ವಿಭಿನ್ನತೆಯು ಬದುಕಿನ ರೀತಿ-ನೀತಿಗಳು ಮತ್ತು ಇತರೆ ವಿವರಣೆಗಳಲ್ಲಿಯೂ ಕಾಣಸಿಗುತ್ತವೆ. ಈ ಪ್ರಾದೇಶಿಕ ಮತ್ತು ಪಂಗಡಗಳ ಗುಣಲಕ್ಷಣಗಳನ್ನು ಮೊದಮೊದಲು ಒಡೆದಿರುವುದು ಧರ್ಮದ ನೆಲೆ. ಒಂದೊಂದು ಪ್ರದೇಶದಲ್ಲಿಯೂ ತಮ್ಮದೇ ಪಂಗಡಗಳನ್ನು ತಾವೇ ರೂಢಿಸಿಕೊಂಡ ಕಟ್ಟುಪಾಡುಗಳ ಚೌಕಟ್ಟಿನಲ್ಲಿ ಬದುಕು ಸಾಗಿಸುತ್ತಿದ್ದ ಜನ, ಧರ್ಮದ ಚೌಕಟ್ಟೊಂದು ಮೇಲೆ ಎದ್ದಾಗ ಇದರಿಂದ ಹೊರಗೆ ಉಳಿಯಲಾರದೆ, ಇದರ ಒಳಗೆ ಬರಲಾಗದೆ ಮೊದಮೊದಲಿಗೆ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂಬುದು ಇತಿಹಾಸದೊಳಕ್ಕೆ ಸೂಕ್ಷ್ಮ ನೋಟ ಹರಿಸಿದಾಗ ಕಾಣಬರುತ್ತವೆ. ಇಲ್ಲಿ ಧರ್ಮ ಎಂದರೇನು ? ಎಂದೂ ತಿಳಿಯಬೇಕಿದೆ. ಧರ್ಮ ಎನ್ನುವುದು ಮೂಲತಃ ಬದುಕಿಗೆ ಒಂದು ನೈತಿಕ ನೆಲೆಗಟ್ಟನ್ನು ತೋರುವಂಥ ಕಟ್ಟುಪಾಡು. ಆದರೆ ಈ ಧರ್ಮವ

ಚೌಕಟ್ಟು ಬರಿಯ ಇಷ್ಟಕ್ಕೇ ನಿಲ್ಲದೆ ಪ್ರಕೃತಿಯಲ್ಲಿನ ಮಾನವ ಬದುಕಿಗೆ ಒಂದು ಹೊಸತನ ತೋರಲು ಹುಟ್ಟಿಕೊಳ್ಳುತ್ತ ಬಂದ ತಾತ್ವಿಕ ದರ್ಶನಗಳ ನೆಲೆಯನ್ನು ತನ್ನೊಳಕ್ಕೆ ತೆಗೆದುಕೊಳ್ಳುತ್ತ ಬಂದಾಗ ಈ ತಾತ್ವಿಕ ದರ್ಶನಗಳನ್ನು ತನ್ನದಾಗಿಸಿಕೊಳ್ಳುವ ಅವಕಾಶವನ್ನು ಕೆಲವರಿಗೆ ಮಾತ್ರ ಮೀಸಲಿರಿಸುವಂತಹ ಬಿಗಿಯ ಕಟ್ಟುಪಾಡುಗಳೂ ರೂಪಿತವಾದುವು. ಈ ಕಟ್ಟುಪಾಡುಗಳೇ ಸಮಾಜದಲ್ಲಿನ ಬದುಕಿಗೆ ಅಸಮತೆ ತರತೊಡಗಿ ಮೇಲು ಕೀಳಿನ ಸೃಷ್ಟಿಗೆ ಕಾರಣಗಳೂ ಆದವು. ಆಶ್ಚರ್ಯವೆಂಬಂತೆ ಈ ಕಟ್ಟುಪಾಡುಗಳನ್ನು ಆರಂಭದಿಂದಲೇ ವಿರೋಧಿಸುತ್ತ ಸಾಮಾಜಿಕ ಬದುಕಿಗೆ ಮುಕ್ತತೆ ತರುವಂಥ ಯತ್ನಗಳೂ ನಡೆದಿವೆ. ಆದರೆ ಈ ಯತ್ನಗಳು ಬಲಗೊಳ್ಳದಂಥ ಪ್ರಭಾವೀ ಹಿಡಿತವನ್ನು ಮೇಲಿನ ನೆಲೆಯಲ್ಲಿಯೇ ಹಲವು ರೀತಿಗಳಲ್ಲಿ ಇರಿಸಿಕೊಳ್ಳುತ್ತ ಬಂದ ಶಕ್ತಿ ಸಾಂಸ್ಕೃತಿಕ ನೆಲೆಯನ್ನು ಹಿಂದೆ ತಳ್ಳಿ ಧರ್ಮವನ್ನು ಮೇಲೆತ್ತಿ ಮುಂದೆ ಇದರೊಂದಿಗೆ ರಾಜಕೀಯವನ್ನು ಬೆರೆಸಿಕೊಂಡಿರುವುದು ಸಾಮಾಜಿಕ ಅಸಮತೋಲನವನ್ನು ಮುಂದೂಡುತ್ತಲೇ ಬಂದಿದೆ. ಸಾಂಸ್ಕೃತಿಕ ನೆಲೆಗಟ್ಟನ್ನು ಪಲ್ಲಟಗೊಳಿಸುವ ಸ್ಥಿತ್ಯಂತರಗಳು ರಾಜಾಡಳಿತಕ್ಕೂ ಮಿಗಿಲಾಗಿ ಧಾರ್ಮಿಕ ನೆಲೆಯಲ್ಲಿ ನಡೆದಿರುವುದನ್ನು ಬುದ್ಧನ ಕಾಲಾವಧಿ ಮತ್ತು ಆತನ ಅನಂತರದಲ್ಲಿ ತರುತ್ತ ಬಂದ ಒಂದು ಪಲ್ಲಟದಲ್ಲಿ ತೋರುತ್ತಿರುವಂತೆಯೇ, ಶಂಕರಾಚಾರ್ಯರ ಕಾಲದಲ್ಲಿ ಮತ್ತೊಂದು ರೀತಿಯ ಪಲ್ಲಟವನ್ನು ತೋರುತ್ತದೆ. ಅಶೋಕ, ಅಕ್ಬರ್, ಕೃಷ್ಣದೇವರಾಯ, ಶಿವಾಜಿ, ಗೌರಾಂಗ, ರಾಮಾನುಜ ಹೀಗೆ ಹಲವರ ಕಾಲಗಳು ಒಂದೊಂದು ತೆರನ ಪಲ್ಲಟವನ್ನು ತಮ್ಮ ಸುತ್ತ ಇರಿಸಿಕೊಂಡಿರುವ ದೃಷ್ಟಾಂತಗಳು ಇತಿಹಾಸದಲ್ಲಿ ಕಾಣಬರುತ್ತವೆ.

ಈ ಹಲವು ಕಾಲಘಟ್ಟಗಳ ಪಲ್ಲಟಗಳ ಹಿಂದೆ ಮುಖ್ಯವಾಗಿ ಕೆಲಸ ಮಾಡಿರುವುದು ತಾತ್ವಿಕ ದರ್ಶನದ ಹಕ್ಕನ್ನು ಮುಕ್ತವಾಗಿಸುವ ಮತ್ತು ಸೀಮಿತವಾಗಿ ಕೆಲವರಿಗೆ ಮಾತ್ರ ಇಡುವ ಯತ್ನ ಎಂಬುದು

ಆಶ್ಚರ್ಯವಾದರೂ ದಿಟವ ಸಂಗತಿಯಾಗಿದೆ. ಇದರತ್ತ ವಿಚಿತ್ರ ಆಕರ್ಷಣೆ ತೋರುತ್ತ ತನ್ನ ಮೇಲುತನ ಕಾಪಾಡಿಕೊಳ್ಳಲು ಹೆಣಗುತ್ತಲೇ ಬಂದ ಆರ್ಯಧರ್ಮ ತನ್ನೊಳಗಿನಲ್ಲೇ ಇದ್ದ ಯತಿ ಪರಂಪರೆಯಲ್ಲಿ ಇದನ್ನು ಈ ಚೌಕಟ್ಟಿನಿಂದ ಮುಕ್ತಗೊಳಿಸುತ್ತ ಸಾಮಾಜಿಕ ಜೀವನವನ್ನು ಹಸನಾಗಿಸುವ ಯತ್ನವನ್ನು ಮಾಡಿದೆ; ಆದರೆ ಚಾತುರ್ವರ್ಣ್ಯಗಳ ಚೌಕಟ್ಟು ತಾನು ರೂಢಿಸಿಕೊಂಡ ನಿಯಮಗಳಲ್ಲಿ ಸಾಮಾಜಿಕ ಜೀವನ ವ್ಯವಸ್ಥೆಗೆ ರೂಪಿಸಿದ ವಿಧಿವಿಧಾನ ಮಾನವ ಜನಾಂಗದ ಬಹುಪಾಲನ್ನು ಮಾನಸಿಕವಾಗಿ ಕೀಳರಿಮೆಯಲ್ಲಿ ನಿಲ್ಲಿಸಿತು. ಇದನ್ನು ತೊಡೆಯುವ ಯತ್ನದಲ್ಲಿ ಮೊಟ್ಟ ಮೊದಲು ಮಹತ್ವದ ಪಾತ್ರ ವಹಿಸಿದ ಬುದ್ಧ ತನ್ನ ಕಾಲಕ್ಕಿಂತಲೂ ಹೆಚ್ಚಿನ ಪ್ರಭಾವವನ್ನು ಅನಂತರದಲ್ಲಿ ನಾಡಿನಲ್ಲಷ್ಟೇ ಅಲ್ಲದೆ ಹೊರಗಿನ ಭಾಗಗಳಿಗೂ ಬೀರಿ ಜನರು ಬದುಕಿಗೆ ಕೀಳರಿಮೆ ತೊಡೆದುಕೊಂಡು ಆತ್ಮಸ್ಥೈರ್ಯ ತಾಳಿಕೊಳ್ಳುವಂಥ ವಿಶ್ವಾಸ ತುಂಬಿದ. ಆದರೆ ಮತ್ತೆ ಈ ನಾಡಿನಲ್ಲಿ ಚಾತುರ್ವರ್ಣ್ಯ ತನ್ನ ಬಲವನ್ನು ಹೆಚ್ಚಿಸಿಕೊಂಡು ಬೌದ್ಧ ಧರ್ಮ ತರಲಾರಂಭಿಸಿದ್ದ ಪರಿವರ್ತನೆಯನ್ನು ಮೊಟಕುಗೊಳಿಸಿ ಧಾರ್ಮಿಕ-ರಾಜಕೀಯ ನೆಲೆಗಳನ್ನು ಅನಂತರದಲ್ಲಿ ಪ್ರಧಾನವಾಗಿಸಿತು. ಮತ್ತೆ ಮತ್ತೆ ಏರು ಪೇರಿನ ಆಟದಲ್ಲಿ ಮುಳುಗುವ ಧರ್ಮ–ರಾಜಕೀಯಗಳ ಈ ಪ್ರಧಾನತ್ವದಲ್ಲಿ ಸಾಂಸ್ಕೃತಿಕ ನೆಲೆ ಪೂರ್ಣವಾಗಿ ಹಿಂದೆ ಸರಿದು ಸಾಮಾನ್ಯ ಜನರ ಬದುಕು ತೀರ ದಯನೀಯ ಸ್ಥಿತಿ ತಲುಪುವತ್ತ ನಡೆಯಿತು. ಈ ವೇಳೆಗೆ ದೂರದಿಂದ ಇಸ್ಲಾಂ ಧರ್ಮವೂ ಆಗಮಿಸುವ ಹವಣಿಕೆಯಲ್ಲಿ ಈ ನಾಡಿನತ್ತ ಮುಖ ಮಾಡಿತ್ತು.

ಗೋರಖನಾಥನ ಜೀವಿತ ಮಧ್ಯಕಾಲೀನ ಭಾರತ ಎದುರಿಸುತ್ತಿದ್ದ ಇಂಥ ಬಿಕ್ಕಟ್ಟಿನ ಸಂಕ್ರಮಣ ಕಾಲದಲ್ಲಿ ಉರುಳಿತು. ನಾಡಿನ ಉದ್ದಗಲಕ್ಕೂ ಈತನ ಪ್ರಭಾವ ಈತನ ಕಾಲಕ್ಕಷ್ಟೇ ಅಲ್ಲದೆ ಅನಂತರಕ್ಕೂ ಒಂದು ಹೊಸ ತಿರುವು ತಂದಿತು. ಇಲ್ಲಿನ ಸಾಂಸ್ಕೃತಿಕ ನೆಲೆ

ಗಟ್ಟಿಗೆ ಒಂದು ಪರಂಪರೆಯನ್ನು ತೋರಿ ಅನನ್ಯವಾದ ಕಾರ್ಯವನ್ನು ಸಂಬಲಸಾಧ್ಯವಾದ ವೈಚಿತ್ರ್ಯದ ಬದುಕಿನಲ್ಲಿ ಈತ ಗೈದಿದ್ದಾನೆ. ಕಣ್ಮರೆಯಾಗುತ್ತಿದ್ದ, ನಿರ್ಲಕ್ಷ್ಯಕ್ಕೊಳಗಾಗಿದ್ದ ಹಲವು ಪುರಾತನ ವಿದ್ಯೆಗಳನ್ನು ಪುನರುಜ್ಜೀವನಗೊಳಿಸಿದ ಗೋರಖನಾಥ ನೈತಿಕತೆಗೆ ಹೊರತಾಗಿ ಕಳಂಕ ತಂದುಕೊಳ್ಳುತ್ತಿದ್ದ ಧಾರ್ಮಿಕ ನೆಲೆಯ ಹಲವರನ್ನು ಸರಿದಾರಿಯಲ್ಲಿ ನಡೆವಂಥ ಯತ್ನದಲ್ಲಿಯೂ ಸಫಲನಾದ.

ಎರಡು : ನಾಥಪಂಥ

ಬೌದ್ಧಧರ್ಮ ಬುದ್ಧನ ಕಾಲಾನಂತರ ಮೂರು, ನಾಲ್ಕು ಶತಮಾನಗಳವರೆಗೆ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳುತ್ತ ಬಂದರೂ, ಮುಂದೆ ಈ ನಾಡಿನಲ್ಲಿ ಬಿಕ್ಕಟ್ಟಿಗೆ ಸಿಲುಕಿತು. ಇದಕ್ಕೆ ಮುಖ್ಯವಾದ ಕಾರಣಗಳು ಎರಡು; ಮೊದಲಿನದು, ಈ ಧರ್ಮದಲ್ಲಿಯೇ ಬುದ್ಧ ನೀಡಿದ ಸಂಘದ ಸ್ವರೂಪ ಒಳಗೊಳ್ಳುತ್ತ ಬಂದ ಬಿರುಕು ಎರಡು ಕವಲುಗಳಾಗಿ ಒಡೆದುಕೊಳ್ಳುವುದರೊಂದಿಗೆ ತಾನು ತರುತ್ತಿದ್ದ ಸಾಮಾಜಿಕ ಪರಿವರ್ತನೆ ಯಥಾಸ್ಥಿತಿಯಲ್ಲಿ ಮುಂದುವರಿಸಿಕೊಳ್ಳಲು ಸಾಧ್ಯವಾಗದಂತೆ ತನ್ನೊಳಗಿನ ಜನಾಂಗದಲ್ಲೇ ಸಮಾಜದ ಬಗ್ಗೆ ಲಘುವಾಗಿ ನಡೆದುಕೊಳ್ಳುವತ್ತ ಹೊರಳಿತ್ತು; ಇದಕ್ಕೆ ಪೂರಕವಾಗಿ ಬೌದ್ಧಧರ್ಮದಿಂದ ಪ್ರೇರಣೆಗೊಂಡಿದ್ದ ತಾಂತ್ರಿಕ ಸಾಧನೆಗಳು ಆರಂಭದಲ್ಲಿನ ಬಿಗುಮತ್ತು ಶಕ್ತಿಕೇಂದ್ರತೆಯನ್ನು ಕಳೆದುಕೊಂಡು ಈ ಸಾಧನೆಗಳಿಗೆ ಉತ್ತೇಜನ ನೀಡಿದ್ದ ಬೌದ್ಧಧರ್ಮಕ್ಕೆ ಕಳಂಕ ಹಚ್ಚತೊಡಗಿದ್ದವು. ಈ ಕಾರಣಕ್ಕೆ ಎದುರಾಗಿ ಚಾತುರ್ವರ್ಣ್ಯದ ನೆಲೆಯಲ್ಲಿ ಸಮಾಜವನ್ನು ಸೃಷ್ಟಿಸಲು ಹವಣಿಸಿದ್ದ ವೈದಿಕ ಪಂಥವು ಬೌದ್ಧಧರ್ಮ ತರಲಾರಂಭಿಸಿದ್ದ ಸಾಮಾಜಿಕ ಪರಿವರ್ತನೆಯನ್ನು ಮುರಿಯಲು ಹವಣಿಸುತ್ತಲೇ ಇದ್ದದ್ದು

ಶಂಕರಾಚಾರ್ಯರ ಕಾಲದಲ್ಲಿ ಮತ್ತೆ ತನ್ನ ಪ್ರಭುತ್ವವನ್ನು ಸಮಾಜದ ಮೇಲೆ ಇರಿಸಿಕೊಳ್ಳಲು ಸಫಲತೆಯ ಹಾದಿ ಕಂಡುಕೊಂಡಿತ್ತು.

ಈ ಚಾತುರ್ವರ್ಣ್ಯದ ನೆಲೆಯನ್ನು ಮುಂದೆ ಮತ್ತೊಮ್ಮೆ ಎದುರಿಸಿದ್ದು ನಾಥಪಂಥ. ಸಾಮಾಜಿಕ ಅಸಮತೆಯ ವಿರುದ್ಧ ಆರಂಭದಿಂದಲೂ ದನಿ ಎತ್ತುತ್ತಿದ್ದ ಹಲವು ಬ್ರಾಹ್ಮಣರೂ ಈ ಸಂಘಟನೆಯಲ್ಲಿ ಸೇರಿದ್ದು ಇದಕ್ಕೆ ಒಂದು ವಿಶೇಷ ಸ್ವರೂಪವನ್ನು ನೀಡಿತ್ತು. ವೈದಿಕ ನೆಲೆಗೆ ಹೊರತಾಗಿ ತಂತ್ರಾಗಮಗಳ ನೆಲೆಯಲ್ಲಿ ಭಾರತೀಯ ಅಧ್ಯಾತ್ಮ ಪರಂಪರೆಗೆ ನಿರಂತರವಾದ ಜೀವಂತಿಕೆ ತುಂಬುತ್ತ ಬರುತ್ತಿರುವ ಈ ತಂತ್ರಾಗಮಗಳ ನೆಲೆಯನ್ನು ತಮ್ಮ ಮೂಲ ಸ್ರೋತವಾಗಿಸಿಕೊಂಡು ಹಲವು ರೀತಿಯಲ್ಲಿ ವೈವಿಧ್ಯಮಯವಾದ ಸಾಧನಾಪಥವನ್ನು ತೆರೆದುಕೊಂಡಿರುವ ಈ ನೆಲೆ ಗ್ರಾಮೀಣ ಜನಪದರ ಬದುಕಿನಲ್ಲಿನ ಸಾಂಸ್ಕೃತಿಕತೆಗೆ ಹತ್ತಿರದ್ದೇ ಆಗಿತ್ತು. ಶಿವ-ಶಕ್ತಿಯರನ್ನು ಕೇಂದ್ರವಾಗಿ ಇರಿಸಿಕೊಂಡ ತಂತ್ರಾಗಮಗಳು ಗ್ರಾಮೀಣರು ಅಥವಾ ಕಾಡಿನ ನಡುವೆ ನಿವಾಸ ಹೊಂದಿ ಅಲೆಮಾರಿಗಳಾಗಿ ಪ್ರಕೃತಿಯಲ್ಲಿನ ಶಕ್ತಿಗಳ ಬಗೆಗೆ ತಮ್ಮದೇ ಆದ ಕಲ್ಪನೆಗಳನ್ನು ಹೊಂದಿ ರೂಢಿಸಿಕೊಂಡಿದ್ದ ಆಚರಣೆಗಳ ಬಗೆಗೂ ಹತ್ತಿರವೇ ಎಂಬಂತಿದ್ದವು. ಆದರೆ ತಂತ್ರಾಗಮಗಳಲ್ಲಿ ಇವುಗಳ ಬಗ್ಗೆ ಒಂದು ಸ್ಪಷ್ಟ ಚೌಕಟ್ಟು ಮತ್ತು ತಿಳಿವಿದ್ದರೆ ಗ್ರಾಮೀಣ ಜನಪದರಲ್ಲಿನ ಸೀಮಿತ ಚೌಕಟ್ಟಿನ ತಿಳಿವು ಪ್ರಾಕೃತಿಕ ಶಕ್ತಿಯನ್ನು ಅರ್ಥೈಸಿಕೊಳ್ಳದಂಥ ಮುಗ್ಧತೆಯಲ್ಲಿತ್ತು. ಹೀಗಾಗಿಯೇ ಚಾತುರ್ವರ್ಣ್ಯದ ನೆಲೆಗೆ ಗ್ರಾಮೀಣ ಜನಪದರ ಸಾಂಸ್ಕೃತಿಕ ಬದುಕು ಗ್ರಾಸವಾಗುತ್ತಿತ್ತು. ಆರ್ಯೀಕರಣಕ್ಕೆ ಗ್ರಾಮೀಣ ಜನಪದ ಒಳಗಾಗುತ್ತಲೇ ಇತ್ತು. ಧರ್ಮ ಎಂಬ ಹೊಸ ಹರಿವಿಗೆ ತಮ್ಮ ಸಾಂಸ್ಕೃತಿಕ ನೆಲೆಯನ್ನು ತನಗರಿವಿಲ್ಲದೆಯೇ ಮುಗ್ಧತೆಯಲ್ಲಿ ತೆರೆದುಕೊಳ್ಳುತ್ತಿತ್ತು; ಸಾಂಸ್ಕೃತಿಕ ನೆಲೆಯ ಮೇಲೆ ಧರ್ಮ-ರಾಜಕೀಯ ಚೌಕಟ್ಟುಗಳು ಒಟ್ಟೊಟ್ಟಿಗೇ ಇಳಿಯತೊಡಗಿದ್ದವು. ಈ ಎಲ್ಲವಕ್ಕೂ ಕಡಿವಾಣ

ಹಾಕುವ ಯತ್ನದಲ್ಲಿ ಒಂದು ಹೊಸ ಆಂದೋಲನಕ್ಕೆ ಬೀಜಾಂಕುರ ವಾಗಿತ್ತು ನಾಥಪಂಥ.

ನಾಥಪಂಥ ತನ್ನನ್ನು ಅಪೌರುಷೇಯ ನೆಲೆಯಿಂದ ಗುರುತಿಸಿ ಕೊಳ್ಳುತ್ತಿದ್ದರೂ ಇದರ ಬೇರುಗಳು ವೇದಕಾಲೀನದಲ್ಲೇ ಚಾತುರ್ವ ಣ್ಯದ ಬಂಧದಿಂದ ಹೊರಗುಳಿಯುತ್ತ ಬಂದಿದ್ದ ಯತಿಮಾರ್ಗ; ಬುದ್ಧ ಮತ್ತು ಆನಂತರದ ತಾಂತ್ರಿಕರು ಮತ್ತು ಗುಹ್ಯ ಸಾಧನೆಗಳ ಹಲವು ಮಾರ್ಗಗಳಲ್ಲಿ ಒಂದು ಹಿನ್ನೆಲೆಯನ್ನು ತೋರಿಕೊಳ್ಳುತ್ತದೆ. ಆದರೆ ಇದು ಹೊಸ ಸ್ವರೂಪವಾಗಿ ಚಾಲನೆಗೊಂಡದ್ದು ಮಧ್ಯಕಾಲೀನ ಭಾರ ತೀಯ ಇತಿಹಾಸದಲ್ಲಿ. ಶೈವ ಪ್ರಾಧಾನ್ಯತೆಯ ಈ ಪಂಥ ಹಲವು ರೀತಿ ಯಲ್ಲಿ ತನ್ನ ಮೂಲವನ್ನು ತೋರಿಕೊಳ್ಳುತ್ತದೆ. ಶಿವ ಅಥವಾ ಆದಿ ನಾಥನಿಂದ ಮತ್ಸ್ಯೇಂದ್ರ ಅಥವಾ ಮಛಂದರನು ದೀಕ್ಷೆ ಪಡೆದು ಅನಂತ ರದಲ್ಲಿ ತನ್ನ ಶಿಷ್ಯರಿಂದ ಈ ಪಂಥ ಬೆಳೆದುಕೊಂಡಿತು ಎನ್ನುವಂತೆಯೋ, ನವನಾರಾಯಣರ ಅವತಾರದಲ್ಲಿ ನವನಾಥರು ಈ ಪಂಥವನ್ನು ಸಂಘ ಟಿಸಿದರು ಎಂಬ ಅಭಿಪ್ರಾಯವನ್ನು ಹಲವೆಡೆಗಳಲ್ಲಿ ತೋರಲಾಗುತ್ತಿದೆ. ಆದಿನಾಥನನ್ನು ದತ್ತಾತ್ರೇಯನನ್ನಾಗಿಸಿರುವ ಕಥೆಗಳಲ್ಲಿಯೂ ನಾಥ ಪಂಥವನ್ನು ನೋಡಲಾಗುತ್ತಿದೆ. ಸುಮಾರು ಹದಿನೈದನೇ ಶತಮಾನ ದಲ್ಲಿನ ಸ್ವಾತ್ಮಾರಾಮಯೋಗಿಯ 'ಹಠಯೋಗ ಪ್ರದೀಪಿಕೆ'ಯಲ್ಲಿ ಹಲವು ನಾಥಸಿದ್ಧರು ಉಲ್ಲೇಖಗೊಂಡಿದ್ದು ಇವರಲ್ಲಿ ಕೆಲವರು ಮಾತ್ರ ಐತಿಹಾಸಿಕ ವ್ಯಕ್ತಿಗಳಾಗಿ ತಮ್ಮ ಕುರುಹುಗಳನ್ನು ತೋರಿಕೊಳ್ಳುತ್ತಿದ್ದು ಉಳಿದವರು ಯೋಗಪರಂಪರೆಯಲ್ಲಿ ಸೇರಿ ಹೋಗಿರುವ ನಾಥಸಿದ್ಧ ರಾಗಿರುವಂತೆ ತೋರಿಕೊಳ್ಳುತ್ತಾರೆ :

ಶ್ರೀ ಆದಿನಾಥ ಮತ್ಸ್ಯೇಂದ್ರ ಶಾಬರಾನಂದ ಭೈರವಾಃ ।
ಚೌರಂಗೀ ಮೀನ ಗೋರಕ್ಷ ವಿರೂಪಾಕ್ಷ ವಿಲೇಶಯಾಃ ॥೫॥
ಮಂಥಾನೋ ಭೈರವೋ ಯೋಗೀ ಸಿದ್ಧಿ ಬುದ್ಧಿಶ್ಚ ಕಂಥಡಿಃ ।
ಕೋರಂಟಕಃ ಸುರಾನಂದಃ ಸಿದ್ಧಿಪಾದಶ್ಚ ಚರ್ಪಟಿಃ ॥೬॥

ಕಾನೇರೀ ಪೂಜ್ಯಪಾದಶ್ಚ ನಿತ್ಯನಾಥೋ ನಿರಂಜನಃ ।
ಕಪಾಲೀ ಬಿಂದುನಾಥಶ್ಚ ಕಾಕಚಂಡೀಶ್ವರಾಹ್ವಯಃ ॥೭॥
ಅಲ್ಲಾಮ ಪ್ರಭುದೇವಶ್ಚ ಘೋಡಾ ಜೋಲೀಚ ಟಿಂಟಿಣಿಃ ।
ಭಾನುಕೀ ನಾದದೇವಶ್ಚ ಖಂಡಃ ಕಾಪಲಕಸ್ತಥಾ ॥೮॥
ಇತ್ಯಾದಯೋ ಮಹಾಸಿದ್ಧಾ ಹಠಯೋಗ ಪ್ರಭಾವತಃ ।
ಖಂಡಯಿತ್ವಾ ಕಾಲದಂಡಂ ಬ್ರಹ್ಮಾಂಡೇತಿ ಚರಂತಿ ತೇ ॥೯॥
(ಹಠಯೋಗ ಪ್ರದೀಪಿಕೆ ಪು-೩)

ಈ ಮಹಾಸಿದ್ಧರಲ್ಲಿ ಮತ್ಸ್ಯೇಂದ್ರ, ಗೋರಕ್ಷ, ಚರ್ಪಟಿ ಮತ್ತು ಅಲ್ಲಾಮಪ್ರಭುದೇವ ಎಂದಿರುವ ಅಲ್ಲಮಪ್ರಭು ಇವರ ಐತಿಹಾಸಿಕತೆ ದೃಢಪಡುತ್ತದೆ. ಉಳಿದವರು ಸಿದ್ಧ ಪರಂಪರೆಯಲ್ಲಿ ಆಗಿಹೋಗಿರುವ ಮಹಾಸಿದ್ಧರು ಎಂದಷ್ಟೇ ಹೇಳಬಹುದು. ಕಾಲದ ನಿಯಮವನ್ನು ಮೆಟ್ಟಿ ದೇಹಾವಸಾನದ ನಂತರವೂ ಈ ಮಹಾಸಿದ್ಧರು ತಮ್ಮ ಹಠ ಯೋಗದಲ್ಲಿನ ಪ್ರಭಾವದಲ್ಲಿ ಬ್ರಹ್ಮಾಂಡದಲ್ಲಿ ಅಗೋಚರವಾಗಿ ಚರಿಸುತ್ತಿದ್ದಾರೆ ಎನ್ನುವ ನಂಬಿಕೆ ಈ ಪರಂಪರೆಯಲ್ಲಿದೆ.

ವೈದಿಕ ನೆಲೆಯಲ್ಲಿನ ಯಜ್ಞಕ್ರಿಯೆಗೆ ತದ್ವಿರುದ್ಧವಾಗಿ ತನ್ನ ದೇಹವನ್ನೇ ಯಜ್ಞಕುಂಡವಾಗಿಸಿಕೊಂಡು ಸಾಧನಾಪಥದಲ್ಲಿ ಅಡಿಯಿಟ್ಟುಕೊಂಡು ನಡೆಯುವ 'ಹಠಯೋಗ'ವು ಪತಂಜಲಿಯ ಅಷ್ಟಾಂಗ ಯೋಗಕ್ಕೆ ಹೊರತಾಗಿ ಷಡಂಗಗಳನ್ನು ಮಾತ್ರ ಒಳಗೊಂಡಿದೆ. ಪತಂಜಲಿ ಅಷ್ಟಾಂಗಗಳೆಂದು ಹೇಳುವಲ್ಲಿ ಮೊದಲಿನ ಯಮ ಮತ್ತು ನಿಯಮಗಳನ್ನು ಕೈಬಿಟ್ಟು ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ ಮತ್ತು ಸಮಾಧಿಗಳಲ್ಲಿ ಯೋಗ ಪಥವನ್ನು 'ಗೋರಕ್ಷ ಶತಕ'ದಲ್ಲಿ ಗೋರಖನಾಥ ಹೇಳಿದ್ದಾನೆ.

ಆಸನಂ ಪ್ರಾಣಸಂರೋಧಃ ಪ್ರತ್ಯಾಹಾರಶ್ಚ ಧಾರಣಾ ।
ಧ್ಯಾನಂ ಸಮಾಧೀರೇತಾನಿ ಯೋಗಾಂಗಾನಿ ವದಂತಿ ಷಟ್ ॥೭॥

ಯಮ ನಿಯಮಗಳು ಸಾಧನಾಪಥದಲ್ಲಿ ತಾವಾಗಿಯೇ ಮೈಗೂಡಿ

ಕೊಳ್ಳುತ್ತವೆ ಎಂಬುದು ಗೋರಖನ ಅಭಿಮತ. ಶರೀರದ ರಚನೆಯನ್ನು ಅರಿಯುವುದರೊಂದಿಗೆ ಎಲ್ಲ ಬಾಹ್ಯಶಕ್ತಿಗಳನ್ನು ಎದುರಿಸುವ ಸ್ಥೈರ್ಯವನ್ನು ತನ್ನ ಶರೀರದಲ್ಲಿ ತುಂಬಿಕೊಂಡು ಬಾಳನ್ನು ಒಂದು ಔನ್ನತ್ಯಕ್ಕೆ ಏರಿಸಿಕೊಳ್ಳುವ ಮಾರ್ಗವಾಗಿಸಲು ನಾಥಪಂಥ ಗೋರಖನಾಥನಲ್ಲಿ ಒಂದು ಹೊಸ ಆಯಾಮವನ್ನೇ ಪಡೆಯಿತು.

ನಾಥಪಂಥ ತನ್ನಲ್ಲಿನ ಯೋಗಿ ಪರಿವ್ರಾಜಕರನ್ನು ಗುರುತಿಸಿಕೊಳ್ಳಲು ಕಿವಿಯನ್ನು ನಡುವಿನಲ್ಲಿ ರಂಧ್ರವಾಗಿ ಚುಚ್ಚುವ ಕ್ರಿಯೆಯಲ್ಲಿ ಉಂಗುರ ಅಥವಾ ಕುಂಡಲ ಧರಿಸುವ ಪರಿಪಾಠವನ್ನು ಮಛಂದರನ ಕಾಲಕ್ಕೂ ಹಿಂದೆಯೇ ರೂಢಿಸಿತ್ತು. ಛಿದ್ರಕರ್ಣ (ಕಾನ್‌ಫಟ್)ರು ಎಂದು ಈ ಕಾರಣಕ್ಕೇ ಇವರಿಗೆ ಕರೆಯುವ ರೂಢಿ ಬೆಳೆದಿತ್ತು. ಹೀಗೆ ಕಿವಿ ಛಿದ್ರಗೊಳಿಸುವ ಕ್ರಿಯೆಯಲ್ಲಿ ರಕ್ತ ಸಂಚಾರದ ನಾಡಿಗಳನ್ನು ಯೋಗಾಭ್ಯಾಸದ ಕ್ರಿಯೆಗಳತ್ತ ಹೊರಳಿಸುವ ಕಾರಣವೂ ಇದೆ ಎನ್ನುವುದು ಗಮನಾರ್ಹವಾಗಿದೆ. ಜಾತಿಯ ಕಟ್ಟುಪಾಡಿಗೆ ಹೊರತಾಗಿ ನಿಲ್ಲುತ್ತ ಸಮಾಜದ ಒಟ್ಟಂದಕ್ಕೆ ಒಂದು ಹೊಸ ಸ್ವರೂಪ ತರುವ ಯತ್ನದತ್ತ ನಡೆದ ನಾಥಪಂಥ ಮಧ್ಯಕಾಲೀನ ಭಾರತದಲ್ಲಿ ರಾಜಪ್ರಭುತ್ವವನ್ನೇ ಅಲುಗಿಸುವಂತೆ ತನ್ನ ಪ್ರಭಾವವನ್ನು ಬೆಳೆಸಿಕೊಂಡಿತು.

ಮೂರು : ಮಛಂದರ ಅಥವಾ ಮತ್ಸ್ಯೇಂದ್ರ

ಗೋರಖನಾಥನ ಜೀವಿತ ಮತ್ಸ್ಯೇಂದ್ರನ ಜೀವಿತದೊಂದಿಗೂ ಬೆರೆತುಕೊಂಡಿರುವುದರಿಂದ ಈತನ ಬಗೆಗೂ ಅಲ್ಪ ಪರಿಚಯ ಪಡೆಯುವುದು ಅಗತ್ಯವಿದೆ. ಈ ಹಿಂದೆ ಸೂಚಿಸಿರುವಂತೆ ನಾಥಪಂಥದ ಮೊದಲ ಮಾನವ ಯೋಗಿಯಲ್ಲಿ ಮತ್ಸ್ಯೇಂದ್ರ ಮೊದಲಿನವನು. ಈತನ ಕಾಲದ ಬಗೆಗೆ ಭಿನ್ನಾಭಿಪ್ರಾಯಗಳಿದ್ದರೂ ಕಾಶ್ಮೀರ ಶೈವ ದರ್ಶನದಲ್ಲಿನ

ಬಹು ದೊಡ್ಡ ಆಚಾರ್ಯನಾಗಿರುವ ಅಭಿನವಗುಪ್ತಪಾದ ತನ್ನ 'ತಂತ್ರಾಲೋಕ'ದಲ್ಲಿ ಮತ್ಸ್ಯೇಂದ್ರನನ್ನು ಉಲ್ಲೇಖಿಸಿ ಗುರುರೂಪದಲ್ಲಿ ಸ್ತುತಿಸಿರುವುದು ಒಂದು ಐತಿಹಾಸಿಕ ಕಾಲಘಟ್ಟವನ್ನು ಕಂಡುಕೊಳ್ಳಲು ನೆರವಾಗುತ್ತದೆ. ಅಭಿನವಗುಪ್ತನ ಕಾಲವನ್ನು ಕಲ್ಹಣನ 'ರಾಜ ತರಂಗಿಣಿ' ಮತ್ತಿತರ ವಿವರಗಳಿಂದ ಕ್ರಿ. ಶ. ೯೪೦-೧೦೧೫ ಎಂದು ವಿದ್ವಾಂಸರು ಸೂಚಿಸಿರುವುದರಿಂದ ಮತ್ಸ್ಯೇಂದ್ರನ ಕಾಲ ಇನ್ನೂ ಹಿಂದೆ ಅಂದರೆ ೯ ಮತ್ತು ೧೦ನೇ ಶತಮಾನದ ಅವಧಿಗೆ ನಿಲ್ಲುತ್ತದೆ.

ದಂತಕಥೆಗಳ ನಡುವೆ ಸಿಲುಕಿಕೊಂಡಿರುವ ಈತನ ಜೀವಿತ ಈ ನಾಡಿನ 'ಜನಪದರ ಸಾಹಿತ್ಯ'ಕ್ಕೆ ನಂಟು ಬೆಳೆಸಿಕೊಂಡಿರುವ ಸ್ವರೂಪದಲ್ಲಿ ಇರುವಂತಹದು. ಬಂಗಾಳಿ ಸಾಹಿತ್ಯದ ಮೊದಲಿನ ಕೃತಿಗಳಲ್ಲಿ ಮೋಚಂದರ್ ಎಂದು ಉಲ್ಲೇಖಗೊಂಡಿರುವ ಈತ ಧರ್ಮ ಅಥವಾ ಆದಿನಾಥನ ಮೃತದೇಹದ ಬೂದಿಯಿಂದ ಅವತರಿಸಿದ 'ಐವರು ಮೂಲಸಿದ್ಧರು' ಗಳಲ್ಲಿ ಈ ಮೀನನಾಥ ಅಥವಾ ಮತ್ಸ್ಯೇಂದ್ರನೂ ಒಬ್ಬ ಎಂದು ಸುಕುಮಾರಸೇನರು 'ಬಂಗಾಳಿ ಸಾಹಿತ್ಯ ಚರಿತ್ರೆ'ಯಲ್ಲಿ ವಿವರ ನೀಡುತ್ತಾರೆ. ಇವರೇ ಮತ್ತೊಂದೆಡೆ ತಮ್ಮ 'ನಾಥಪಂಥ' ಲೇಖನದಲ್ಲಿ ನೀಡಿರುವ ಕಥೆ ಹೀಗಿದೆ : "ನಾಥಪಂಥದ ಸಂಪ್ರದಾಯದ ಪ್ರಕಾರ ಇರುವ ವಿಶ್ವಸೃಷ್ಟಿಯ ಕಥೆಗೂ ಋಗ್ವೇದದ ಸೃಷ್ಟಿಗೀತೆಗೂ (R. V. X. 129) ಮನುಸಂಹಿತೆಯ ಮೊದಲ ಸಾಲುಗಳಿಗೂ ಆಶ್ಚರ್ಯಕರ ಸಾಮ್ಯಗಳಿವೆ : ಸೃಷ್ಟಿಗೆ ಮೊದಲು ಎಲ್ಲೆಲ್ಲೂ ಕತ್ತಲು, ಶೂನ್ಯ ಆವರಿಸಿತ್ತು. ಸೃಷ್ಟಿಯ ಪ್ರೇರಣೆ ಶೂನ್ಯದಲ್ಲಿ ಹುಟ್ಟಿ ತರಂಗವೊಂದನ್ನು ಉಂಟುಮಾಡಿತು. ತರಂಗದಿಂದ ಒಂದು ಬುದ್ಬುದ ಅಂಡ ಜನಿಸಿತು. ಅಂಡದಿಂದ ಆದಿದೇವನು ಹುಟ್ಟಿದ. ಅಂಡದ ಮೇಲ್ಪದರ ಕೆಳಪದರಗಳು ವಿಶ್ವದ ಮೇಲು, ಕೆಳಗಣ ಭಾಗಗಳಾದವು. ಆದಿನಾಥನ– ನಾಥಗುರುಗಳಲ್ಲಿ ಮೊದಲನೆಯವನಾದ ಇವನನ್ನು ಪರಮದೈವದೊಂದಿಗೆ ಸಮೀಕರಿಸಿರುತ್ತಾರೆ — ಬೆವರಿನಿಂದ ಇವನ ಪತ್ನಿ

'ಕೆತಕಾ' ಹುಟ್ಟಿದಳು. (ಇವಳನ್ನು ಮನಸಾ ಎಂದೂ ಕರೆಯುತ್ತಾರೆ) ಆದಿನಾಥನ ಸಂಸರ್ಗವಿಲ್ಲದೆ ಗರ್ಭಿಣಿಯಾದ ಈಕೆ ಬ್ರಹ್ಮ, ವಿಷ್ಣು, ಶಿವ ರಿಗೆ ಜನ್ಮಕೊಟ್ಟಳು. ಬ್ರಹ್ಮ ಇವಳ ಬಾಯಿಂದ, ವಿಷ್ಣು ಹಣೆಯಿಂದ ಹುಟ್ಟಿ ಬಂದ, ಶಿವ ಉಳಿದವರಂತೆ ಸಾಮಾನ್ಯ ರೀತಿಯ ಲ್ಲಿ ಹುಟ್ಟಿದ. ಮಕ್ಕಳು ಹುಟ್ಟುವ ಮೊದಲೇ ಆದಿನಾಥನು ತಪಸ್ಸನ್ನು ಆಚರಿಸಲು ಪವಿತ್ರವಾದ ಬಲ್ಲುಕಾ ನದಿಯ ದಂಡೆಗೆ ಹೊರಟು ಹೋಗಿದ್ದ. ಸ್ವಲ್ಪ ಕಾಲಾನಂತರ ಆದಿನಾಥನು ತನ್ನ ಮಕ್ಕಳನ್ನು ಪರೀಕ್ಷಿಸುವ ಉದ್ದೇಶ ದಿಂದ ತನ್ನನ್ನು ನಾರುವ ಹೆಣವನ್ನಾಗಿ ಮಾರ್ಪಡಿಸಿಕೊಂಡು ಬಲ್ಲುಕಾ ನದಿಯಲ್ಲಿ ತೇಲಿಕೊಂಡು ಬಂದ. ದೂರದಿಂದಲೇ ಕೊಳೆತ ದೇಹದ ವಾಸನೆ ಬಂದದ್ದನ್ನು ಗಮನಿಸಿ ಬ್ರಹ್ಮ ಓಡಿ ಹೋದ; ವಿಷ್ಣು ಅದನ್ನು ದೂರ ತಳ್ಳಿದ; ಆದರೆ ಶಿವನಿಗೆ ಮಾತ್ರ ಅದು ತನ್ನ ತಂದೆಯೇ ಎಂದು ತಿಳಿಯಿತು. ಅನಂತರ ಮೂವರೂ ಸಹೋದರರೂ ಸೇರಿ ಶವದ ಸಂಸ್ಕಾರ ನಡೆಸಿದರು. ಬೂದಿಯಿಂದ ನಾಥಪಂಥದ ಪಂಚ ಸಂತರು (ಆದಿಸಿದ್ಧರು) ಹುಟ್ಟಿ ಬಂದರು; ಹೊಕ್ಕುಳಿಂದ ಮೀನನಾಥ, ತಲೆಯಿಂದ ಗೋರಕ್ಷನಾಥ ಹುಟ್ಟಿದರು (ಇತರ ಕಥೆಗಳ ಪ್ರಕಾರ ಗೋರಕ್ಷ 'ಘೋರ್' ಅಥವಾ ಕೊಳಕು, ಬೆವರು ಅಥವಾ ಅಮೇಧ್ಯ ದಿಂದ ಹುಟ್ಟಿದ); ಹಾಡಿ–ಪಾ ಮೂಳೆಗಳಿಂದ ಹುಟ್ಟಿದ; ಕಿವಿಯಿಂದ ಕಾನು–ಪಾ ಬಂದ; ಕಾಲುಗಳಿಂದ ಚೌರಂಗಿನಾಥ ಹುಟ್ಟಿದ".

"ಶಿವನು ಮೂವರಲ್ಲಿ ಬುದ್ಧಿವಂತನಾಗಿದ್ದರಿಂದಲೂ ಸಹಜ ರೀತಿಯಲ್ಲಿ ಅವನು ಮಗನಾಗಿ ಹುಟ್ಟಿದ್ದರಿಂದಲೂ ಕೆತಕಾಳನ್ನು ಮದು ವೆಯಾಗಲು ಆದಿನಾಥನು ಶಿವನನ್ನೇ ಆರಿಸಿದ. ಶಿವನೊಡನೆ ಮದುವೆ ಯಾದ ಅನಂತರ ಅವಳಿಗೆ ಗೌರಿ (ಅಥವಾ ಚಂಡಿ) ಎನ್ನುವ ಹೆಸರು ಬಂತು. ಐದು ಜನ ಸಿದ್ಧರೂ ಶಿವನ ಅನುಯಾಯಿಗಳಾದರು. ಪರಮಜ್ಞಾನ (ಮಹಾಜ್ಞಾನ) ಶಿವನಿಗೊಬ್ಬನಿಗೇ ಇದ್ದದ್ದು. ಈ ಪರಮಜ್ಞಾನದ ರಹಸ್ಯವನ್ನು ತಿಳಿದವನಿಗೆ ಜನನ-ಮರಣಗಳಿರಲಿಲ್ಲ.

ಗೌರಿಗೆ ಈ ರಹಸ್ಯವನ್ನು ತಿಳಿಯಬೇಕೆಂಬ ಆಸೆ ಬಂತು. ಆದರೆ ಶಿವ ಅದನ್ನು ಯಾರಿಗೂ ಹೇಳಿಕೊಡಲು ಇಷ್ಟಪಡುತ್ತಿರಲಿಲ್ಲ. ಹೀಗಿದ್ದೂ ಹೆಂಡತಿಯ ಆಸೆಯನ್ನು ಅವನು ಬಹುಕಾಲ ನೆರವೇರಿಸದೆ ಇರಲು ಆಗಲಿಲ್ಲ. ರಹಸ್ಯ ಇನ್ಯಾರ ಕಿವಿಗೂ ಬೀಳದಿರಲೆಂದು ಶಿವ ಅತ್ಯಂತ ಸುರಕ್ಷಿತ ಜಾಗವನ್ನು ಹುಡುಕಿ ಹೆಂಡತಿಯನ್ನು ನಡು ಸಮುದ್ರದ ಗುಡ್ಡೆಯೊಂದಕ್ಕೆ ಕರೆದುಕೊಂಡು ಹೋದ. ಏನೋ ಅದ್ಭುತವಾದದ್ದು ಜರುಗುತ್ತದೆ ಎಂದು ಮೀನನಾಥನಿಗೆ ಅನಿಸಿತ್ತು. ಶಿವ ಈ ಪರಮಜ್ಞಾನವನ್ನು ಗೌರಿಗೆ ಹೇಳಿಕೊಡುವ ಸಮಯದಲ್ಲಿ ಆಕೆ ನಿದ್ರಾವಶಳಾಗುವಂತೆ ಮೀನನಾಥ ಮಾಡಿಬಿಟ್ಟ. ಗೌರಿ ಇದನ್ನು ಕೇಳಿಸಿಕೊಳ್ಳಬಾರದೆಂದೇ ಅವನ ಉದ್ದೇಶವಾಗಿತ್ತು. ಗೌರಿ ನಿದ್ದೆ ಮಾಡುತ್ತಿದ್ದಾಳೆ ಎನ್ನುವುದು ಶಿವನಿಗೆ ಹೊಳೆಯಲಿಲ್ಲ. ಗೌರಿಯ ಧ್ವನಿಯನ್ನು ಅನುಕರಿಸಿ ಮೀನನಾಥ ಉಚಿತ ಸಮಯದಲ್ಲಿ ಉಚಿತ ಸ್ವರ ಹೊರಡಿಸಿ ಗೌರಿ ಮನಸ್ಸಿಟ್ಟು ಕೇಳುತ್ತಿದ್ದಾಳೆ ಎನ್ನುವ ಭ್ರಮೆ ಹುಟ್ಟಿಸಿದ. ಮಾತು ಮುಗಿದ ಅನಂತರ ಗೌರಿಯ ನಿದ್ದೆಯೂ ಮುಗಿಯಿತು. ಆಕೆ ಪತಿಯಿಂದ ಈ ಪರಮಜ್ಞಾನದ ರಹಸ್ಯವನ್ನು ಮತ್ತೆ ಕೇಳಿದಳು. ಮೀನನಾಥ ತನ್ನನ್ನು ವಂಚಿಸಿದ್ದಾನೆ ಎನ್ನುವುದು ಶಿವನಿಗೆ ಆಗ ತಿಳಿಯಿತು. ಈ ಪರಮಜ್ಞಾನ ಒಂದು ದಿನ ಅವನಿಗೆ ಮರೆತು ಹೋಗಲಿ ಎಂದು ಶಿವ ಅವನಿಗೆ ಶಾಪವಿತ್ತ. ನೇಪಾಳ ಹಾಗೂ ಟಿಬೇಟಿಯನ್ ಸಂಪ್ರದಾಯಗಳಲ್ಲಿ ಮತ್ಸ್ಯೇಂದ್ರನಾಥನನ್ನೂ– ಈತ ನೇಪಾಳದ ರಕ್ಷಾ ದೇವತೆಯೂ ಹೌದು– ಅವಲೋಕಿತೇಶ್ವರನೊಂದಿಗೆ ಸಮೀಕರಿಸುತ್ತಾರೆ. ಮೀನಿನ ರೂಪ ಧರಿಸಿ ಶಿವನ ಉಪದೇಶವನ್ನು ಕೇಳಿಸಿಕೊಂಡ ಅನಂತರ ಈತನಿಗೆ ಮತ್ಸ್ಯೇಂದ್ರನಾಥ ಎನ್ನುವ ಹೆಸರು ಬಂತು ಎನ್ನುವ ಕಥೆಯೂ ಬಂದಿದೆ.”

(ಯುಗಯಾತ್ರಿ ಭಾರತೀಯ ಸಂಸ್ಕೃತಿ— ಸಂ. ೪, ಪು. ೨೧೨-೧೩)

ಈ ಕಥೆಯಲ್ಲಿ ಈತನಿಗೆ ಮತ್ಸ್ಯೇಂದ್ರ ಎಂದು ಹೆಸರು ಬಂದಿರು

ವುದಕ್ಕೆ ಒಂದು ಎಳೆ ದೊರೆಯುತ್ತದೆ. ಹೀಗೆಯೇ 'ನವನಾಥ ಭಕ್ತಿ ಸಾರ' ದಲ್ಲಿ "ಪ್ರಾಜ್ಞಿಕ ಕವಿಯಾದ ನಾರಾಯಣನು ಯಮುನೆಯ ನೀರಿನಲ್ಲಿ ಬಿದ್ದ ಬ್ರಹ್ಮದೇವನ ವೀರ್ಯವನ್ನು ನುಂಗಿದ ಮೀನಿನ ಹೊಟ್ಟೆಯಲ್ಲಿ 'ಮಚ್ಛೇಂದ್ರನಾಥ' ನಾಗಿ ಪ್ರಕಟಗೊಳ್ಳಬೇಕು" ಎಂಬ ಹಿನ್ನೆಲೆಯಲ್ಲಿ ನವನಾಥರಾಗಿ ನವನಾರಾಯಣರು ಅವತರಿಸಿದರು ಎಂದು ಕೊಡುವಾಗ ಮೀನಿನಿಂದಲೇ ಈತ ಜನಿಸಿದ್ದನ್ನು ನೀಡಲಾಗಿದೆ. ಈ ಕಥೆಯಲ್ಲಿ ಈತ ಬೆಸ್ತರ ಅಂದರೆ ಮಚಲೀಗಳ ನಡುವೆ ಹುಟ್ಟಿರಬೇಕು ಎಂಬ ಶಂಕೆ ಮೂಡುತ್ತದೆ. ಆದರೆ ಹಜಾರಿ ಪ್ರಸಾದ್ ದ್ವಿವೇದಿ ಅಂಥ ವಿದ್ವಾಂಸರು ಈತನನ್ನು ಹುಟ್ಟಿನಿಂದ ಬ್ರಾಹ್ಮಣನಾಗಿರಬೇಕು ಎಂಬ ತೀರ್ಮಾನದಲ್ಲಿ ಇಡುತ್ತಾರೆ.

ಮೊದಲು ಬೌದ್ಧನಾಗಿದ್ದ ಮತ್ಸ್ಯೇಂದ್ರನಾಥ ಅನಂತರ ಶೈವ ಧರ್ಮದತ್ತ ಹೊರಳಿಕೊಂಡ ಎಂದೂ ಹೇಳಲಾಗುತ್ತಿದೆ. ಕಾಶ್ಮೀರ ಶೈವದಲ್ಲಿನ 'ಕೌಲ' ಪ್ರಕಾರಕ್ಕೆ ಮತ್ಸ್ಯೇಂದ್ರನಾಥನ ಕೊಡುಗೆ ಸಾಕಷ್ಟು ಪ್ರಮಾಣದಲ್ಲಿ ಇರುವುದು ದೃಢಪಡುತ್ತಿರುವ ಅಂಶವಾಗಿದೆ. 'ಕೌಲ ಜ್ಞಾನ ನಿರ್ಣಯ' ದೊಂದಿಗೆ ಈತ ಹಲವು ಕೃತಿಗಳನ್ನು ರಚಿಸಿದ್ದು ಕೆಲವು ಲುಪ್ತವಾಗಿದ್ದರೂ 'ಶಾಬರ ಚಿಂತಾಮಣಿ'ಯಂಥದು ಲಭ್ಯದಲ್ಲಿದೆ. ಮತ್ಸ್ಯೇಂದ್ರನಾಥನ ಹೆಸರಿನಲ್ಲಿಯೂ ನಾಥಪಂಥದ ಒಂದು ಕವಲು ಉಳಿದುಕೊಂಡಿದ್ದು ಈಗಲೂ ತನ್ನ ಇರವನ್ನು ದೇಶದ ಹಲವೆಡೆ ತೋರಿಕೊಳ್ಳುತ್ತಿದೆ. ಗೋರಖನಾಥ ಈ ಮತ್ಸ್ಯೇಂದ್ರನ ಜೀವಿತವನ್ನು ಉದ್ಧರಿಸಿ ಈತನಿಗೆ ಗೌರವದ ಸ್ಥಾನ ಕಲ್ಪಿಸಿರುವುದನ್ನು ಮುಂದೆ ನೋಡಬಹುದು.

ಅಧ್ಯಾಯ ೨

ಜೀವಿತದ ರೇಖೆಗಳು

ಒಂದು : ದಂತಕತೆಗಳಲ್ಲಿನ ಎಳೆಗಳು

ಗೋರಖನಾಥ ಪಂಚಸಿದ್ಧರಲ್ಲಿ ಒಬ್ಬನಾಗಿ ಸೃಷ್ಟಿಗೊಂಡ ಎನ್ನುವ ನಾಥಪಂಥ ಪರಂಪರೆಯಲ್ಲಿನ ಕಥೆಯನ್ನು ಈ ಹಿಂದೆಯೇ ನೋಡಿದ್ದೇವೆ. ಇದಕ್ಕೆ ಹೊರತಾಗಿ ಇರುವ ಹಲವು ಕಥೆಗಳಲ್ಲಿ ಗೋರಖನಾಥನ ಜೀವಿತವನ್ನು ತೋರುವ ಹಲವು ಮುಖ್ಯ ಆಕರಗಳಲ್ಲಿ 'ನವನಾಥ ಭಕ್ತಿಸಾರ'ವೂ ಒಂದು.

ಇಲ್ಲಿ ಕಾಣಬರುವ ಗೋರಖನಾಥನ ಜೀವಿತ ಸಂಕ್ಷಿಪ್ತವಾಗಿ ಹೀಗಿದೆ :

ಈ ಹಿಂದೆ ಹೇಳಿರುವಂತೆ ಯಮುನಾ ನದಿಯಲ್ಲಿನ ಒಂದು ಮೀನಿನ ಒಡಲಿನಲ್ಲಿ ದೇಹತಾಳಿ ಒಬ್ಬ ಅಂಬಿಗನಿಗೆ ದೊರೆತ ಮೀನಿನಿಂದ ಬಾಲಕನಾಗಿಯೇ ಹೊರಬಂದು ಆನಂತರ ತಪಸ್ಸಿನಲ್ಲಿ ಶಿವ ಮತ್ತು ದತ್ತಾತ್ರೇಯರ ಅನುಗ್ರಹ ಪಡೆದುಕೊಳ್ಳುವ ಮಂಛದರ ಹಲವು ಸಿದ್ಧಿಗಳಲ್ಲಿ ದೇಶಾಟನೆಗೆ ಹೊರಡುತ್ತಾನೆ. ಈ ದೇಶಾಟನೆಯಲ್ಲಿ ಬಂಗಾಲ ದೇಶದಲ್ಲಿನ ಚಂದ್ರಗಿರಿ ಎಂಬ ಗ್ರಾಮಕ್ಕೆ ಬರುತ್ತಾನೆ. ಇಲ್ಲಿ ಸರ್ವೋಪದಯಾಳ ಎಂಬ ಗೌಡಬ್ರಾಹ್ಮಣನೊಬ್ಬ ಹೆಂಡತಿ ಸರಸ್ವತಿಯೊಂದಿಗೆ

ಯಜನ, ಯಾಜನಗಳಲ್ಲಿ ಕರ್ಮಠನಾಗಿರುತ್ತಾನೆ. ಆದರೆ ಈ ದಂಪತಿಗಳಿಗೆ ಮಕ್ಕಳಿರುವುದಿಲ್ಲ. ಇವರು ಈ ಚಿಂತೆಯಲ್ಲಿ ಇರುವ ಸಮಯದಲ್ಲಿಯೇ ಮಚ್ಛೇಂದ್ರನಾಥನು ಈ ಮನೆಗೆ ಹೋಗಿ 'ಅಲಖ' ಎಂದು ಕೂಗಿ ಭಿಕ್ಷೆಗಾಗಿ ನಿಲ್ಲುತ್ತಾನೆ. "ಮಾಯಿ ಭಿಕ್ಷಾ ಡಾಲೋ" ಎಂದು ಭಿಕ್ಷೆ ಬೇಡುತ್ತಾನೆ. ಸರಸ್ವತಿ ಇವನಿಗೆ ಆಸನವಿತ್ತು ಕುಳ್ಳಿರಿಸಿ ತನ್ನ ದುಃಖವನ್ನು ತೋಡಿಕೊಳ್ಳುತ್ತಾಳೆ. "ನಮ್ಮ ವಂಶವೃದ್ಧಿಗೆ ಸಂತತಿಯಿಲ್ಲ"... ಎಂಬ ಆರ್ತತೆಯಲ್ಲಿನ ಈಕೆಯ ಬೇಡಿಕೆಯನ್ನು ಕೇಳಿ ಮಚ್ಛೇಂದ್ರ ಈಕೆಗೆ ಮಂತ್ರ ಭಸ್ಮವನ್ನು ನುಂಗಿ ಮಲಗಿಕೋ... ನಿನ್ನ ಉದರದಿಂದ ಮಗು ಜನಿಸುವುದು" ಎಂದು ಆಶೀರ್ವದಿಸುತ್ತಾನೆ... ಯಾತ್ರೆಗೆ ಮುಂದೆ ಹೊರಡುತ್ತಾನೆ.

ಆನಂತರ ಸರಸ್ವತಿ ನೆರೆಯವರಲ್ಲಿ ಈ ಮಹಾತ್ಮನಿಂದ ಭಸ್ಮ ದೊರೆತ ಹರುಷವನ್ನು ಹೇಳಿಕೊಳ್ಳುತ್ತಾಳೆ. ಆದರೆ ಅವರು ಈಕೆಯಲ್ಲಿ ಅನುಮಾನ ಹುಟ್ಟಿಸುತ್ತಾರೆ. "ಕಿವಿಹರಕರು ಮಹಾ ಧೂರ್ತರು, ಕಿವಿ ಹರಕರಲ್ಲಿ ವಾಮಮಾರ್ಗದ ಪ್ರಯೋಗಗಳು ಬಹಳ. ಯಾವಳೊಬ್ಬ ಸುಂದರಿಯನ್ನು ಕಂಡರೆ ಸಾಕು. ಮಂತ್ರ ಪ್ರಯೋಗದಿಂದ ಅವಳನ್ನು ನಾಯಿಯನ್ನಾಗಿ ಮಾಡುವರು...." ಎಂದೆಲ್ಲ ಹೇಳಿ ಈಕೆಯಲ್ಲಿ ಭಸ್ಮ ಸೇವನೆಗೆ ಶಂಕೆ ಮೂಡಿಸುತ್ತಾರೆ. ಮನೆಗೆ ಬಂದ ಇವಳು ಭಸ್ಮದ ಚಿಮಟಿಗೆಯನ್ನು ತೆಗೆದುಕೊಂಡು ಗೋದಲೆಗೆ ಹೋಗುತ್ತಾಳೆ. ಅಲ್ಲಿ ಸಗಣಿ, ಕಸ ಚೆಲ್ಲುವ ತಗ್ಗಿನಲ್ಲಿ (ಅರ್ಥಾತ್ ತಿಪ್ಪೆಯಲ್ಲಿ) ಈ ಭಸ್ಮವನ್ನು ಚೆಲ್ಲುತ್ತಾಳೆ.

ಆನಂತರ, ತನ್ನ ದೇಶಾಟನೆಯಲ್ಲಿ ಹಲವು ವಿಧದ ಕಾರ್ಯಗಳಲ್ಲಿ ಮುಳುಗುತ್ತ ಯೋಗಮಾರ್ಗದ ಸಿದ್ಧನಾಗಿ ಬಂಗಾಲದೇಶದ ಈ ಚಂದ್ರಗಿರಿಗೆ ಹನ್ನೆರಡು ವರ್ಷಗಳ ನಂತರ ಹೊರಳಿ ಬರುತ್ತಾನೆ. ಈ ಹಿಂದೆ ನೀಡಿದ್ದ ಭಸ್ಮದ ಸ್ಮರಣೆ ಮತ್ಸ್ಯೇಂದ್ರನಲ್ಲಿ ಮೂಡುತ್ತದೆ. ನೆನಪಿನಲ್ಲಿದ್ದ ಮನೆಯಲ್ಲಿ ಗೃಹಿಣಿಯ ಹೆಸರು ಮತ್ತಿತರ ವಿವರಗಳನ್ನು

ವಿಚಾರಿಸುತ್ತಾನೆ. "ನಿನ್ನ ಬಾಲಕನು ಎಲ್ಲಿರುವನು ತೋರಿಸು" ಎಂದು ಸರಸ್ವತಿಯನ್ನು ಕೇಳುತ್ತಾನೆ. "ಇದುವರೆಗೂ ನಾನು ಪುತ್ರ ಮುಖವನ್ನು ನೋಡಿಲ್ಲ" ಎನ್ನುತ್ತಾಳೆ ಈಕೆ. ಈ ಹಿಂದೆ ಕೊಟ್ಟಿದ್ದ ಭಸ್ಮದ ನೆನಪು ಮಾಡಿ "ಮಗು ಜನಿಸಿಲ್ಲವೇಕೆ ?" ಎಂದು ಕೇಳುತ್ತಾನೆ ಮತ್ಸ್ಯೇಂದ್ರ. ಈಕೆ ತಾನು ಮಾಡಿದ ತಪ್ಪನ್ನು ಹೇಳಿಕೊಳ್ಳಲಾರದೆ ತೊಳಲಾಟದಲ್ಲಿ ಮುಳುಗುತ್ತಾಳೆ. ಕೊನೆಗೆ ಸತ್ಯವನ್ನು ಹೇಳಿ ಮತ್ಸ್ಯೇಂದ್ರನಲ್ಲಿ ಕ್ಷಮೆ ಕೋರುತ್ತಾಳೆ ; ಭಸ್ಮ ಚೆಲ್ಲಿದ ತಾಣವನ್ನು ಮತ್ಸ್ಯೇಂದ್ರನಿಗೆ ತೋರುತ್ತಾಳೆ. ಗೊಬ್ಬರದ ಗುಡ್ಡೆಯತ್ತ ದನಿ ಯೆತ್ತಿದ ಮತ್ಸ್ಯೇಂದ್ರ ಕೂಗುತ್ತಾನೆ! "ಪ್ರತಾಪವಂತಾ, ಮಿತ್ರ ವರ್ಯಾ, ಸೂರ್ಯಸುತನೆ, ನೀನು ಗೊಬ್ಬರದಲ್ಲಿಯೇ ಇದ್ದುದು ನಿಜವಾದರೆ ಈಗ ಬೇಗ ಹೊರಟು ಬಾ.... ನಿನಗೆ ಉತ್ತಮವಾದ ನರ ದೇಹ ಜನ್ಮವು ಗೊಬ್ಬರಗಿರಿಯಲ್ಲಿ ಪ್ರಾಪ್ತವಾಯಿತು. ಆದ್ದರಿಂದ ನಿನಗೆ ಗೋರಕ್ಷಕನೆಂಬ ಹೆಸರು ಅನ್ವರ್ಥಕವಾಮದೆಂದು ನನಗನಿಸು ವುದು.... ಎಲೈ ಗೋರಕ್ಷನಾಥನೆ ಹೊರಬೀಳು !".

"ಮಹಾರಾಜಾ, ಗುರುವರ್ಯ, ಗೋರಕ್ಷನೆಂಬ ನಾನು ಇಲ್ಲಿ ರುವೆ" ಎಂದು ಪ್ರತ್ಯುತ್ತರ ನೀಡಿ ಆನಂತರ ಗೋರಕ್ಷ ಗೊಬ್ಬರದಿಂದ ಹೊರಬರುತ್ತಾನೆ. ಹನ್ನೆರಡು ವರ್ಷದ ಬಾಲಕನಾಗಿಯೇ ಹೊರ ಬಂದಿರುವ ಈತ ಮತ್ಸ್ಯೇಂದ್ರನ ಜೊತೆಗೂಡಿ ಹೊರಡುತ್ತಾನೆ.

ದಾರಿಯಲ್ಲಿ ಗುರುವಿನ ಮಾತಿನಂತೆ ಒಂದು ಗ್ರಾಮದಲ್ಲಿ ಭಿಕ್ಷೆ ಬೇಡಿ ತರಲು ಹೋದ ಗೋರಖ ಒಬ್ಬ ಗೃಹಿಣಿ ನೀಡಿದ ಭೋಜನ ಪದಾರ್ಥಗಳನ್ನು ತಂದು ಗುರುವಿಗೆ ಅರ್ಪಿಸುತ್ತಾನೆ. ಈ ಭೋಜನ ಪರಿಕರಗಳಲ್ಲಿ ಮತ್ಸ್ಯೇಂದ್ರನಿಗೆ ವಡೆಗಳು ತುಂಬ ಪ್ರಿಯವಾಗಿ ಮತ್ತಷ್ಟು ಬೇಕು ಎನ್ನಿಸುತ್ತದೆ. ಬೇಡಿ ತರುವುದಾಗಿ ಗೋರಖ ಹೋಗುತ್ತಾನೆ. ಮೊದಲು ಭಿಕ್ಷೆಯಿತ್ತಿದ್ದ ಮನೆಯಲ್ಲಿಯೇ ಹೋಗಿ ಭಿಕ್ಷೆ ಕೇಳುತ್ತಾನೆ. ಗೃಹಿಣಿ ಕಟಕು ಮಾತಿನಲ್ಲಿ "ವಡೆಗಾಗಿ ನಿನ್ನ

ಕಣ್ಣು ತೆಗೆದುಕೊಂಡು ಹೋಗು...." ಎಂದದ್ದನ್ನು ಕೇಳಿ ಥಟ್ಟನೆ ತನ್ನ ಕಣ್ಣ ಗುಡ್ಡೆಯನ್ನು ಹೊರತೆಗೆದು ಅಂಗೈಯಲ್ಲಿ ಇರಿಸಿಕೊಳ್ಳುತ್ತಾನೆ. ಇದನ್ನು ಕಂಡ ಗೃಹಿಣಿ ಈತನ ಗುರು ಭಕ್ತಿಗೆ ಮೆಚ್ಚಿ, ತಾನು ಮಾಡಿದ ಅಲ್ಪತನಕ್ಕಾಗಿ ಲಜ್ಜೆಪಟ್ಟು ಇನ್ನಷ್ಟು ವಡೆಗಳನ್ನು ಕೊಟ್ಟು ಕಳಿಸುತ್ತಾಳೆ. ನಂತರ ಮತ್ಸ್ಯೇಂದ್ರನಿಗೆ ವಿಷಯ ತಿಳಿದು ತನ್ನ ಶಕ್ತಿಯಿಂದ ಗೋರಖನ ಕಣ್ಣುಗಳನ್ನು ಮೊದಲಿನಂತೆ ದೇಹದ ಅಂಗಾಂಗಕ್ಕೆ ಕೂಡುವಂತೆ ಮಾಡುತ್ತಾನೆ. ಗೋರಖನ ಗುರು ಭಕ್ತಿಗೆ ತುಂಬ ಪ್ರಸನ್ನನಾಗಿ ತನ್ನಲ್ಲಿನ ವಿಶೇಷ ವಿದ್ಯೆಯಾದ ಶಾಬರ ವಿದ್ಯೆಯನ್ನು ಮೊದಲುಗೊಂಡು ಹಲವು ವಿದ್ಯೆಗಳನ್ನು ಗೋರಖನಿಗೆ ನೀಡುತ್ತಾನೆ....

ಗುರು ಮತ್ಸ್ಯೇಂದ್ರನ ಅನುಚರನಾಗಿ ಹಲವು ವಿದ್ಯೆಗಳಲ್ಲಿ ನಿಪುಣತೆ ಪಡೆದುಕೊಳ್ಳುವ ಗೋರಖನಾಥ ಗುರು ಮತ್ಸ್ಯೇಂದ್ರ ಮತ್ತೆ ದೇಶಾಟನೆಗೆ ಹೊರಟಾಗ ಜೊತೆಗೂಡಿ ಹೊರಡುತ್ತಾನೆ. ಈ ದೇಶಾಟನೆಯಲ್ಲಿ ಈ ಇಬ್ಬರೂ ಬದರಿಕಾಶ್ರಮವನ್ನು ಪ್ರವೇಶಿಸುತ್ತಾರೆ. ಇಲ್ಲಿ ಶಂಕರ ಅರ್ಥಾತ್ ಶಿವ ಮತ್ಸ್ಯೇಂದ್ರನಿಗೆ ಪ್ರಸನ್ನನಾಗಿ ಗೋರಖನಾಥನಿಗೆ ಹಲವು ವಿದ್ಯೆಗಳನ್ನು ನೀಡಿದ್ದರೂ ತಪಸ್ಸಿನ ಕೊರತೆಯನ್ನು ಹೇಳಿ, ಗೋರಖನನ್ನು ತಪಸ್ಸಿಗೆ ಕೂರಿಸಲು ಹೇಳುತ್ತಾನೆ. ಬಾಲಕನಾದ ಗೋರಖ ತಪಸ್ಸಿನ ತೀವ್ರ ಕ್ಲೇಶವನ್ನು ಹೇಗೆ ಸಹಿಸಿಯಾನು ? ಎಂದುಕೊಂಡರೂ ಶಿವ ಅಥವಾ ಆದಿನಾಥನ ಅನುಜ್ಞೆಯಂತೆ ಬದರಿಕಾಶ್ರಮದಲ್ಲಿ ಗೋರಖನಾಥನನ್ನು ತಪಸ್ಸಿಗೆ ಕೂರಿಸಿ, ಹನ್ನೆರಡು ವರ್ಷಗಳ ನಂತರ ಭೆಟ್ಟಿಯಾಗುವುದಾಗಿ ತಿಳಿಸಿ ದೇಶಾಟನೆಗೆ ಮುಂದೆ ಹೊರಡುತ್ತಾನೆ. ಇಲ್ಲಿ ಆದಿನಾಥನೇ ಗೋರಖನಾಥನ ಸೇವೆಯಲ್ಲಿ ನಿಂತು ಬಂದ ವಿಘ್ನಗಳನ್ನು ಪರಿಹರಿಸುತ್ತಾನೆ.

ಅನಂತರ ಈ ಬದರಿಕಾಶ್ರಮಕ್ಕೆ ಜಾಲಂಧರ ಮತ್ತು ಕಾನಿಫ ಬರುತ್ತಾರೆ, ಕಾನಿಫನೂ ಶಿವನ ಸಾಕ್ಷಿಯಾಗಿ ಪೂರ್ಣ ತಪಸ್ಸಿಗಾಗಿ ಕೂರುತ್ತಾನೆ. ಹನ್ನೆರಡು ವರ್ಷಗಳವರೆಗೆ ಈರ್ವರೂ ಈ ಸ್ಥಳದಲ್ಲಿ ಪೂರ್ಣ

ತಪವನ್ನು ಆಚರಿಸುತ್ತಾರೆ. ಉದ್ಯಾಪನೆಯನ್ನೂ ನೆರವೇರಿಸುತ್ತಾರೆ. ಪರಸ್ಪರರಲ್ಲಿ ಪರಿಚಯು ಇರದ ಈ ಇಬ್ಬರೂ ಅನಂತರ ತಪಸ್ಸು ಪೂರ್ಣವಾದ ನಂತರ ಇಲ್ಲಿಂದ ಹೊರಡುತ್ತಾರೆ. ಕಾನಿಫ ಉತ್ತರಕ್ಕೆ ಹೊರಟರೆ, ಗೋರಖನಾಥನು ಉತ್ತರ ಪೂರ್ವ ಮಧ್ಯಕೋನದಲ್ಲಿ ಸಂಚರಿಸುತ್ತ ಗುರು ಮತ್ಸ್ಯೇಂದ್ರನನ್ನು ಕಾಣುವ ಹಂಬಲದಲ್ಲಿ ಹೊರಡುತ್ತಾನೆ. ಗುರುವಿನ ವಿಯೋಗ ತೀವ್ರಗೊಂಡಂತೆ ಕಂಡಕಂಡವರನ್ನೆಲ್ಲ ಕೇಳುತ್ತ ಹೊರಟ ಗೋರಖನಾಥ ಹೇಲಾ ಪಟ್ಟಣದಲ್ಲಿನ ಗ್ರಾಮಾರಕ್ಷಕರ ಮೂಲಕ ಇಲ್ಲಿಗೆ ಜಾಲಂಧರ ಬಂದಿದ್ದನ್ನು ಕೇಳಿ ತಿಳಿದು, ಈತನ ತಲೆಯ ಮೇಲೆ ಹುಲ್ಲುಹೊರೆ ನಿರಾಧಾರವಾಗಿ ನಿಲ್ಲುವ ಬೆರಗಿನ ಪರಿಯನ್ನು ಕೇಳಿ, ಈತನನ್ನೇ ಗೋರಕ್ಷ ಎಂದು ತಿಳಿದಿದ್ದ ಜನರನ್ನು, "ಆ ಗೋರಕ್ಷಕನು ಇಲ್ಲಿ ಎಷ್ಟು ದಿನವಿದ್ದ ಮತ್ತು ಇಲ್ಲಿಂದ ಎಲ್ಲಿಗೆ ಹೋದ ?" ಎಂದು ಕೇಳುತ್ತಾನೆ. ಒಂದು ವರ್ಷದವರೆಗೆ ಇಲ್ಲಿದ್ದ ಆತ ಎಲ್ಲಿಗೆ ಹೋದನೋ ತಿಳಿದಿಲ್ಲ, ಹೋಗಿ ಆಗಲೇ ಹತ್ತು ವರ್ಷಗಳಾದವು ಎಂದು ಜನರಿಂದ ಕೇಳಿ ತಿಳಿಯುತ್ತಾನೆ.

ಗುರು ಮತ್ಸ್ಯೇಂದ್ರನನ್ನು ಅರಸುತ್ತ ಈ ಊರಿನಲ್ಲಿಯೇ ಮನೆ ಮನೆಗೂ ಹೋಗಿ "ಅಲಖ" ಎಂದು ಗರ್ಜಿಸುತ್ತಿದ್ದ ಗೋರಕ್ಷ, ಉಲುವು ಅರ್ಥಾತ್ ಸೂರು ಇರದ ಮನೆಯನ್ನು ಕಂಡು ಇಲ್ಲಿಯೂ "ಅಲಖ" ಎಂದು ಕೂಗುತ್ತಾನೆ. ಈ ಪ್ರಶ್ನೆಗೆ ಭೂಮಿಯಿಂದ "ಆದೇಶ" ಎಂಬ ಉತ್ತರ ಕೇಳುತ್ತದೆ. ನಂತರ ಭೂಮಿಯಲ್ಲಿ ಇರುವವನು ಜಾಲಂಧರ. ಈತನನ್ನು ರಾಜ ಗೋಪಿಚಂದನು ತನ್ನ ಪಟ್ಟದರಾಣಿ ಲುಮಾವತಿಯ ಈರ್ಷ್ಯೆಯ ಮಾತುಗಳನ್ನು ಕೇಳಿ, ತಾಯಿ ಮೈನಾವತಿಯು ಜಾಲಂಧರನಿಗೆ ಮಾಡುತ್ತಿದ್ದ ಸೇವೆಗೆ ಅಪಾರ್ಥ ಹಚ್ಚಿ ಇವನನ್ನು ಕೊಲ್ಲುವ ಸಂಚಿನಲ್ಲಿ ಒಂದು ಗುಂಡಿಯಲ್ಲಿ ಹೂಳಿರುವುದು ಜಾಲಂಧರನ ಮಾತಿನಿಂದಲೇ ಗೋರಖನಿಗೆ ತಿಳಿಯುತ್ತದೆ. ಜಾಲಂಧರ

ಈ ವಿಷಯುವನ್ನು ತನ್ನ ಶಿಷ್ಯ ಕಾನಿಫ ಕಂಡರೆ ತಿಳಿಸುವಂತೆ ಹೇಳುವುದನ್ನು ಕೇಳಿಕೊಂಡು ಇಲ್ಲಿಂದ ಹೊರಡುತ್ತಾನೆ.

ಜಗನ್ನಾಥಕ್ಕೆ ಬಂದು ಬಂಗಾಲವನ್ನು ಪ್ರವೇಶಿಸಿ ಊರೂರಲ್ಲಿ ಅಲೆಯುತ್ತ ಹೊರಟಾಗ ಒಂದು ಅರಣ್ಯದಲ್ಲಿ ಅಕಸ್ಮಾತ್ತಾಗಿ ಇಲ್ಲಿ ಕಾನಿಫನ ಭೆಟ್ಟಿಯಾಗುತ್ತದೆ. ಇಬ್ಬರೂ ಪರಸ್ಪರರ ಗುರುತು ಪರಿಚಯುವನ್ನು ಹೊಂದುತ್ತಾರೆ. ಗೋರಖ ಮತ್ತು ಕಾನಿಫರ ನಡುವೆ ತಂತಮ್ಮ ಶಕ್ತಿ ಪ್ರದರ್ಶನಗಳ ಪ್ರಸಂಗವೂ ನಡೆಯುತ್ತದೆ. ಈ ಸಮಯುದಲ್ಲಿಯೇ ಗೋರಖನಿಂದ ಕಾನಿಫನಿಗೆ ಈತನ ಗುರು ಜಾಲಂಧರ ಗೊಬ್ಬರದ ಗುಂಡಿಯಲ್ಲಿ ಭೂಮಿಯೊಳಗೆ ಇರುವುದೂ, ಕಾನಿಫನಿಂದ ಗೋರಖನಿಗೆ ಈತನ ಗುರು ಮತ್ಸ್ಯೇಂದ್ರನು ಸ್ತ್ರೀ ರಾಜ್ಯದಲ್ಲಿ ಇರುವ ಸಂಗತಿಯೂ ತಿಳಿಯುತ್ತದೆ. ಇಬ್ಬರೂ ತಂತಮ್ಮ ಗುರುವನ್ನು ಅವರ ಸ್ಥಿತಿಯಿಂದ ಮುಕ್ತಗೊಳಿಸಲು ಹೊರಡುತ್ತಾರೆ.

ಗೋರಖನಾಥ ಗೌಡ ಬಂಗಾಲವನ್ನು ಹಿಂದಿಟ್ಟು ಸ್ತ್ರೀ ರಾಜ್ಯದ ಸೀಮೆಗೆ ಬರುತ್ತಾನೆ. ಸ್ತ್ರೀ ರಾಜ್ಯದಲ್ಲಿ ರಾಣಿಯೊಂದಿಗೆ ವಿಲಾಸದಲ್ಲಿ ಇರುವ ಗುರು ಮತ್ಸ್ಯೇಂದ್ರನನ್ನು ಗುರುತಿಸುವನೋ ಇಲ್ಲವೋ ಎಂಬ ಶಂಕೆಯಲ್ಲಿ ಇರುವಾಗ, ಸ್ತ್ರೀ ರಾಜ್ಯಕ್ಕೆ ಅದರಲ್ಲಿಯೂ ಮತ್ಸ್ಯೇಂದ್ರ ಇರುವಲ್ಲಿಗೆ ಪ್ರವೇಶಿಸುವುದು ಸುಲಭವಲ್ಲ ಎಂದು ಗೋರನಾಥನಿಗೆ ತಿಳಿಯುತ್ತದೆ. ಒಬ್ಬ ನೃತ್ಯಗಾರ್ತಿಯು ನೆರವಿನಲ್ಲಿ ಸ್ತ್ರೀ ವೇಷಧಾರಿಯಾಗಿಯೇ ಗೋರಖ ಪಟ್ಟಣವನ್ನು ಪ್ರವೇಶಿಸುತ್ತಾನೆ. ಇಲ್ಲಿ ಎದುರಾಗುವ ಅಡ್ಡಿಗಳನ್ನೆಲ್ಲ ತನ್ನ ವಿದ್ಯೆ ಮತ್ತು ಸೂಕ್ಷ್ಮತೆಗಳಿಂದ ನಿವಾರಿಸಿಕೊಳ್ಳುತ್ತ ಸ್ತ್ರೀಯರ ನಡುವೆ ಭೋಗಲೋಲುಪತೆಯಲ್ಲಿ ಮುಳುಗಿದ್ದ ಮತ್ಸ್ಯೇಂದ್ರನ ಎದುರಿಗೆ ಹೋಗುವಲ್ಲಿ ಸಫಲನಾಗುತ್ತಾನೆ. ತನ್ನ ಸ್ತ್ರೀರೂಪದಲ್ಲಿಯೂ ಎಲ್ಲ ಸ್ತ್ರೀಯರ ನಡುವೆ ತನ್ನತ್ತ ಎಲ್ಲರ ಕಂಗಳ ನೋಟವನ್ನು ಸೆಳೆದುಕೊಳ್ಳುವಂಥ ಕಾಂತಿಯನ್ನು ತುಂಬಿಕೊಂಡಿದ್ದ ಗೋರಖನಾಥ, ನಡುವಿಗೆ ಮೃದಂಗ ಕಟ್ಟಿಕೊಂಡು ನೃತ್ಯ

ಗಾತಿಯು ನರ್ತನಕ್ಕೆ ಮೃದಂಗ ನುಡಿಸಲು ಆರಂಭಿಸುತ್ತಾನೆ. ಮೃದಂಗ ವಾದನಕ್ಕೆ ಎಲ್ಲರೂ ತಲೆದೂಗುವಂಥ ಕೌಶಲ ತೋರಿಕೊಳ್ಳುತ್ತಲೇ ಗೋರಖನಾಥ ತಾಲ ಲಯದಲ್ಲಿ 'ಚಲೋ ಮಚಂದರ ಗೋರಖ ಆಯಾ' ಎಂದು ನುಡಿಸುತ್ತ ಮತ್ಸ್ಯೇಂದ್ರನಲ್ಲಿ ತಾನು ಬಂದಿರುವ ಸೂಚನೆಯನ್ನು ನೀಡುತ್ತಾನೆ. ನಂಬಲಾಗದೆ ಸುತ್ತೆಲ್ಲ ಅರಸಿ ಕೊನೆಗೆ ಗೋರಖನೇ ವೇಷಧಾರಿಯಾಗಿ ಬಂದಿರುವುದನ್ನು ಕಂಡು ಮತ್ಸ್ಯೇಂದ್ರ ಸಂತೋಷಗೊಂಡು ಇಲ್ಲಿ ಸ್ತ್ರೀಯರು ಮತ್ತೆ ಮರುಳುಗೊಳಿಸಿ ತನ್ನನ್ನು ಕಟ್ಟುಹಾಕಿಕೊಳ್ಳುವುದಕ್ಕೆ ಒಳಗಾಗದೆ ಸ್ತ್ರೀ ರಾಜ್ಯದಿಂದ ಎಲ್ಲವನ್ನು ತೊರೆದು ಹೊರಡುತ್ತಾನೆ. ಇವನೊಂದಿಗೆ ಇಲ್ಲಿ ಈತನಿಗೆ ಜನಿಸಿದ್ದ ಮೀನನಾಥನೂ ಸೇರಿಕೊಳ್ಳುತ್ತಾನೆ. ಮೂವರೂ ಬಂಗಾಲವನ್ನು ಸೇರುತ್ತಾರೆ. ಇಲ್ಲಿ ಕಾನಿಫ ಮತ್ತು ಜಾಲಂಧರನನ್ನೂ ಭೆಟ್ಟಿಯಾಗುತ್ತಾರೆ. ಈವೇಳೆಗೆ ಜಾಲಂಧರನನ್ನು ಭೂಮಿಯಿಂದ ಹೊರತೆಗೆದು ಮುಕ್ತಗೊಳಿಸಲಾಗಿರುತ್ತದೆ. ಬಂಧುಗಳಂತೆ ಒಟ್ಟುಗೂಡಿ ಸಂತೋಷಗೊಂಡ ನಂತರ ಮೂವರೂ ಜಗನ್ನಾಥದ ಮಾರ್ಗವಾಗಿ ಸೌರಾಷ್ಟ್ರಕ್ಕೆ ಹೋಗುತ್ತಾರೆ. ಇಲ್ಲಿ ಮೀನನಾಥ ಮಾಡಿಕೊಂಡ ಹೇಸಿಗೆಯನ್ನು ತೊಳೆಯುವಾಗ ಗೋರಖನಾಥನು ಮೀನನಾಥನನ್ನು ಕಲ್ಲಿಗೆ ಬಟ್ಟೆಯಂತೆ ಒಗೆದು ಕೊಲ್ಲುತ್ತಾನೆ. ಮತ್ಸ್ಯೇಂದ್ರ ಇದರಿಂದ ದುಃಖದಲ್ಲಿ ಮುಳುಗುತ್ತಾನೆ. ಸಂಜೀವಿನಿಯಲ್ಲಿ ಗೋರಖ ಮತ್ತೆ ಮೀನನಾಥನನ್ನು ಜೀವಂತಗೊಳಿಸುತ್ತಾನೆ.

ನಂತರ ಮತ್ಸ್ಯೇಂದ್ರ ಗಹನೀನಾಥನಿಗೆ ಅಭ್ಯಾಸ ಮಾಡಿಸಲು ಕನಕಗಿರಿಯಲ್ಲಿ ನಿಲ್ಲುತ್ತಾನೆ. ಮೀನನಾಥ ತನ್ನ ತಾಯಿಯ ಬಳಿಗೆ ಹೋದ ಮೇಲೆ, ಗೋರಖನಾಥ ದೇಶಾಟನೆಯಲ್ಲಿ ಉಜ್ಜಯನಿಯಲ್ಲಿ ಭರ್ತರಿಯನ್ನು ಭೇಟಿಯಾಗುತ್ತಾನೆ. ಇವನು ಇಲ್ಲಿಗೆ ಬರುವ ವೇಳೆಗೆ ಭರ್ತರಿಯ ಮುದ್ದಿನ ರಾಣಿ ಪಿಂಗಲೆಯು ಭರ್ತರಿಯೇ ಒಡ್ಡಿದ ಪರೀಕ್ಷೆಯಲ್ಲಿ, ತಾನು ಸತ್ತ (ಸುಳ್ಳು) ಸುದ್ದಿಯನ್ನು ಕೇಳಿ ಅಗ್ನಿ

ಪ್ರವೇಶಿಸಿ ಮೃತ ಹೊಂದಿರುತ್ತಾಳೆ. ಹೊರಳಿ ಪಟ್ಟಣಕ್ಕೆ ಬಂದು ಪಿಂಗಲೆ ಸಹಗಮನಳಾದ ಸುದ್ದಿ ಕೇಳಿ ಸ್ಮಶಾನ ಸೇರಿದ ಭರ್ತರಿ ಶೋಕದಲ್ಲಿ ಹುಚ್ಚನಂತಾಗಿ ಸ್ಮಶಾನವಾಸಿಯಾಗಿಯೇ ಉಳಿದುಕೊಂಡಿರುತ್ತಾನೆ. ಹುಚ್ಚನಂತೆ ವರ್ತಿಸಲು ತೊಡಗಿರುತ್ತಾನೆ.

ಈ ಸ್ಮಶಾನಕ್ಕೆ ಬಂದ ಗೋರಖನಾಥನು ವ್ಯಾಮೋಹಗಳನ್ನೆಲ್ಲ ಬಿಟ್ಟುಕೊಂಡ ಭರ್ತರಿಯ ಅವಸ್ಥೆಯನ್ನು ಕಂಡು ಪಿಂಗಲೆಯ ಹಲವಾರು ರೂಪಗಳನ್ನು ಜೀವಂತವಾಗಿಯೇ ಸ್ಮಶಾನದ ಚಿತೆಯಿಂದ ಮರಳಿ ಸೃಷ್ಟಿಸಿ ಭರ್ತರಿಯ ಒಳಗಣ್ಣನ್ನು ತೆರೆಸುತ್ತಾನೆ. ಭರ್ತರಿಯೊಂದಿಗೆ ಗಿರಿನಾರಕ್ಕೆ ದತ್ತಾತ್ರೇಯನಲ್ಲಿಗೆ ಹೋಗುತ್ತಾನೆ....

—ಮುಂದಿನ ಕಥೆ ಹಲವು ದೇಶಾಟನೆಗಳಲ್ಲಿ ವೈಚಿತ್ರ್ಯಕ ಸಂದರ್ಭಗಳೊಂದಿಗೆ ಸಾಗಿಕೊಳ್ಳುತ್ತದೆ.

ಎರಡು : ದಂತಕತೆಗಳಿಂದ ಹೊರಗುಳಿದ ಪರೀಕ್ಷಕ ನೋಟಗಳು.

ಮೇಲಿನ ಕಥೆಯನ್ನು ಸಂಕ್ಷಿಪ್ತವಾಗಿ ನೀಡಿದ್ದು ಜನಪದ ಮತ್ತು ಪೌರಾಣಿಕ ಕಥನದ ಅಂಶವನ್ನು ಒಳಗೊಂಡೂ ಗೋರಖನ ಬದುಕಿನ ಮಸಕು ಚಿತ್ರಕ್ಕೆ ಈ ಕಥೆ ಒಂದು ಎಳೆಯನ್ನು ವೈದಿಕ ಸಂಪ್ರದಾಯದ ರಚನೆಯಾಗಿದ್ದೂ ಕೆಲವು ಮುಖ್ಯ ಹೊಳಹುಗಳನ್ನು 'ನವನಾಥ ಭಕ್ತಿಸಾರ' ತೋರುತ್ತದೆ ಎಂಬ ಕಾರಣಕ್ಕಾಗಿ.

ದೇಶದ ಹಲವು ಭಾಗಗಳಲ್ಲಿ ಗೋರಖನಾಥನ ಬಗೆಗೆ ಹಲವು ರೀತಿಯ ಕಥೆಗಳು ದೊರೆಯುತ್ತವೆ. ಬಂಗಾಲ ಸಾಹಿತ್ಯದಲ್ಲಿನ ಮೊಟ್ಟ ಮೊದಲ ಕೃತಿಗಳಲ್ಲಿ 'ಗೋರಕ್ಷ ವಿಜಯ'ವೂ ಒಂದು. ಇದರ ಕರ್ತೃ ಒಬ್ಬ ಮುಸ್ಲೀಮ (ಫೈಜುಲ್ಲ) ಎನ್ನುವುದು ಗಮನಾರ್ಹ.

'ನವನಾಥ ಭಕ್ತಿಸಾರ'ದ ಕಥೆಯಲ್ಲಿ ದತ್ತಾತ್ರೇಯನನ್ನು ಕೇಂದ್ರ ವಾಗಿರಿಸಿಕೊಂಡು ನವನಾರಾಯಣರ ಅವತಾರವಾಗಿ ನವನಾಥರುಗಳ ಬಗೆಗೆ ದೊರೆಯುವ ವಿವರಗಳಲ್ಲಿ, ಹಲವು ಇತರೆಡೆಗಳಲ್ಲಿ ಇರುವ ವಿವರಗಳಿಗೂ ಸಮಾನವಾಗಿಯೇ ಇವೆ. ಬಂಗಾಲದಲ್ಲಿನ 'ಮತ್ಸ್ಯೇಂದರ ನನ್ನು ಗೋರಖ ಸ್ತ್ರೀರಾಜ್ಯದಿಂದ ಹೊರತರುವ ಕಥೆಗೆ ಹತ್ತಿರದ್ದಾಗಿ ಇರುವಂತೆಯೇ, ಗೋಪಿಚಂದ – ಮೈನಾವತಿ, ಜಾಲಂಧರ ಮತ್ತು ಕಾನಿಫರ ಕಥೆ'ಯೂ ಇದೆ.

ಇತಿಹಾಸಕ್ಕೆ ಈವರೆಗೂ ಕೂಡದ ಜಾನಪದದೊಳಗಿನ ಮುಖ್ಯ ವಿವರಗಳಲ್ಲಿ ಭರ್ತರಿ (ಭತೃಹರಿ) ಮತ್ತು ಗೋಪಿಚಂದ್ರರ ಬದುಕಿನ ವಿವರಗಳೂ ಇವೆ. ಹೀಗೆಯೇ ಪಂಜಾಬ್, ರಾಜಸ್ಥಾನ್ ಪ್ರಾಂತ್ಯಗಳಲ್ಲಿ ಗೋರಖನಾಥನ ಸುತ್ತಲೇ ಹೆಣದುಕೊಂಡ 'ಗೂಗ'ನ; ನೇಪಾಳಕ್ಕೆ ಬಂದ ಬರಗಾಲವನ್ನು ನೀಗಿಸುವಲ್ಲಿ ಪ್ರಮುಖ ಪಾತ್ರವಹಿಸಿ ಅಲ್ಲಿನ ರಾಜ ನಿಂದಲೇ ಗೌರವಾನ್ವಿತನಾದ ಗೋರಖನು ಗೂರ್ಖರ ನಾಡಿಗೂ ಮಹತ್ವದ ಪುರುಷನಾಗಿದ್ದಾನೆ; ಆದರೂ ಈ ಎಲ್ಲ ಐತಿಹಾಸಿಕತೆ ದೂರವೆಂಬಂತೆ ಜಾನಪದದ ಹೊದಿಕೆಯಲ್ಲಿಯೇ ಸುಳಿದಾಡಿಕೊಳ್ಳುತ್ತಿವೆ.

ಹೀಗೆಯೇ ಗೋರಖನಾಥ ಹುಟ್ಟಿನಿಂದ ಬ್ರಾಹ್ಮಣ ಎನ್ನುವ ಹಲವು ವಿದ್ವಾಂಸರ ತೀರ್ಮಾನಗಳೂ ವಿವಾದಗಳಲ್ಲಿ ಮುಳುಗುತ್ತಿವೆ. ಹಜಾರಿ ಪ್ರಸಾದ್ ದ್ವಿವೇದಿಯವರು "ಗೋರಖನಾಥ ನಿಶ್ಚಿತವಾಗಿಯೂ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಮತ್ತು ಬ್ರಾಹ್ಮಣ ವಾತಾವರಣ ದಲ್ಲಿಯೇ ದೊಡ್ಡವನಾಗಿದ್ದಾನೆ ಎನ್ನುವುದು ನನ್ನ ಅನುಮಾನ" ಎಂದು 'ನಾಥಸಂಪ್ರದಾಯ'ದಲ್ಲಿ ಬರೆಯುತ್ತಾರೆ (ಪುಟ. ೯೬). ಆದರೆ ಶಂಕರ ಮೊಕಾಶಿಯವರು ಗೋರಖಪ್ರಭುವಿನ ಜಾತಿ "ನೇಕಾರ" ಎಂದು ಸೂಚಿಸುತ್ತಾರೆ. ಆದರೆ ಆತನ ಹೆಸರು ಮತ್ತು ಹುಟ್ಟಿನ ಕತೆಗಳಲ್ಲಿರುವ ಮೂಲ ಎಳೆ ಈತ ಮೂಲತಃ ಗೋವಳಿಗನಾಗಿರಬೇಕು ಎಂಬ ಅನುಮಾನ ತರಿಸುತ್ತದೆ.

ನೇಪಾಳ ಲೈಬ್ರರಿಯಲ್ಲಿ ಸಿಕ್ಕಿದ ಒಂದು ಆಧಾರದಲ್ಲಿ ಈತ ಗೋದಾವರಿ ತೀರದ ಬಡವ ಪ್ರಾಂತ್ಯದಿಂದ ಬಂದವನು ಎಂಬ ಅಭಿಪ್ರಾಯ ನೀಡುವಲ್ಲಿ ಈತ ಇಲ್ಲಿ ಹಸುಗಳನ್ನು ಕಾಯುತ್ತಿದ್ದವನಾಗಿದ್ದ ಎಂದೂ ಹೇಳಲಾಗುತ್ತಿದೆ. ಆದರೆ ಇದರೊಂದಿಗೇ ಈತ ನೇಪಾಳದಿಂದ ಪಂಜಾಬಿಗೆ ಬಂದು ನಾಸಿಕಕ್ಕೆ ಹೋದ; ಪಶ್ಚಿಮೀ ಹಿಮಾಲಯದವನಾಗಿದ್ದ; ಬಂಗಾಳೀಯ ಮುಂತಾಗಿ ಹಲವು ಅಭಿಪ್ರಾಯಗಳು ಈತನ ಮೂಲಪ್ರಾಂತ್ಯದ ಸುತ್ತ ನಿಲ್ಲುತ್ತಿವೆ. ದೇಶಾಟನೆಯಲ್ಲೇ ಮುಳುಗಿರುತ್ತಿದ್ದ ಈತನ ಬಗೆಗೆ 'ಜನ್ಮಸ್ಥಳ' ಮತ್ತು ಜಾತಿಯ ಕುರಿತು 'ಇದಮಿತ್ಥಂ' ಎಂದು ಹೇಳಲು ಸಾಧ್ಯವಾಗುವುದಿಲ್ಲ. ಜಾತಿಯ ಕಟ್ಟುಪಾಡಿನಿಂದ ಹೊರಗುಳಿದಿದ್ದಂತೆಯೇ ಯಾವುದೊಂದು ನಾಡಿನ ಸೆಳೆತವನ್ನು ಕಳೆದುಕೊಂಡಿದ್ದ ಎನ್ನುವುದು ಮಾತ್ರ ಆತನ ಕೃತಿಗಳು ಮತ್ತು ಎಲ್ಲೆಡೆಯೂ ದೊರೆಯುವ ಕಥೆಗಳಿಂದ ಕಾಣಬರುತ್ತಿದೆ.

ಮೂರು : ಇತರೆ ಆಕರಗಳಲ್ಲಿನ ಸ್ಪಷ್ಟತೆಗಳು

ಗೋರಖನಾಥನ ಬಗೆಗೆ ದೊರೆಯುವ ಆಕರಗಳಲ್ಲಿ ತುಂಬ ಮುಖ್ಯವಾದವು ಸ್ವಯಂ ಗೋರಖನ ಕೃತಿಗಳು ಮತ್ತು ಆತನ ಬಗೆಗೆ ಉಳಿದವರಿಂದ ಸಿಗುತ್ತಿರುವ ವಿವರಗಳು.

ಗೋರಖನ ಕೃತಿಗಳಲ್ಲಿ ಲುಪ್ತವಾಗದೆ ಉಳಿದಿರುವ ಕೃತಿಗಳಲ್ಲಿ ತುಂಬ ಮುಖ್ಯವಾಗಿ ಇರುವುದು 'ಸಿದ್ಧಸಿದ್ಧಾಂತ ಪದ್ಧತಿ'.

ಆದಿನಾಥಂ ನಮಸ್ಕೃತ್ಯ ಶಕ್ತಿಯುಕ್ತಂ ಜಗದ್ಗುರುಂ ।
ವಕ್ಷ್ಯೇ ಗೋರಕ್ಷನಾಥೋಽಹಂ ಸಿದ್ಧಸಿದ್ಧಾಂತ ಪದ್ಧತಿಂ ॥

—ಎಂದು ಗೋರಖನೇ ಕೃತಿಯ ಆರಂಭದಲ್ಲಿ ಹೇಳಿಕೊಳ್ಳುತ್ತಾನೆ. ಕೃತಿಯಲ್ಲಿ ಗೋರಖನ ಜೀವಿತದಲ್ಲಿನ ವಿವರಗಳ ಬಗೆಗೆ ಯಾವ ವಿವರ

ಗಳೂ ಇರದೆ ಯೋಗದ ರಹಸ್ಯಗಳು ಮಾತ್ರ ಸ್ಥಾನ ಪಡೆದುಕೊಂಡಿವೆ. ಆದರೂ ಈ ಕೃತಿಯಲ್ಲಿ ಯೋಗಿಗಳ ಜೀವನವನ್ನು ಕುರಿತ ವಿಷಯಗಳು ಲಭ್ಯವಾಗುತ್ತವೆ. ಇವು ಯತಿ ಪರಂಪರೆ ಅಥವಾ ಅವಧೂತ ಮಾರ್ಗಕ್ಕೆ ಕೂಡಿಕೊಳ್ಳುವಂಥವಾಗಿದ್ದು ಗೋರಖನಾಥನ ಜೀವಿತ ನೆಲೆ ಉರುಳಿ ರುವ ಮಾರ್ಗಕ್ಕೆ ಸ್ಪಷ್ಟತೆ ಕೊಡುತ್ತವೆ; ಮತ್ತು ಪ್ರಕೃತಿಯಲ್ಲಿನ ಜೀವ ಸೃಷ್ಟಿಯ ಬಗೆಗೆ ತೀರ ಆಳದ ಸೂಕ್ಷ್ಮ ವಿವರಗಳನ್ನು ನೀಡುವುದ ರೊಂದಿಗೆ ಶಾರೀರಕ ರಚನೆಯಲ್ಲಿ ಪ್ರಾಕೃತಿಕವಾಗಿಯೇ ಹುದುಗಿ ಕೊಂಡಿರುವ ಹಲವು ಬಗೆಯ ಹೆಣಿಗೆಗಳನ್ನೂ ಇವುಗಳ ತಿಳಿವಿನಲ್ಲಿ ಯೋಗಿ ಪೂರ್ಣ ಅರಿವಿನತ್ತ ಸಾಗಿಕೊಳ್ಳುತ್ತ ಸಹಜವಾಗಿಯೇ ಉನ್ನತ ಅವಸ್ಥೆಗೆ ಏರಿಕೊಳ್ಳುವುದನ್ನೂ ನೀಡಲಾಗಿದೆ. ಗೋಪನೀಯ ಎಂದು ಹೇಳುವಲ್ಲಿ ಈ ಯೋಗಮಾರ್ಗ ವಿದ್ಯೆ ತನ್ನ ಮೂಲತನವನ್ನು ಕಳೆದು ಕೊಂಡು ಲಘುವಾಗಬಾರದು ಎಂಬ ಆಶಯವಿರುವಂತೆಯೇ, ಈ ಮಾರ್ಗದಲ್ಲಿ ನಡೆಯುವ ಯಾವುದೇ ಜೀವಿಯಾದರೂ ಔನ್ನತ್ಯವನ್ನು ಕಂಡುಕೊಳ್ಳಬಹುದು ಎಂಬ ಸಂಗತಿಯೂ ಇದೆ; ಆರ್ಯ ನೆಲೆಯಂತೆ ಹುಟ್ಟನ್ನು ಆಧರಿಸಿದ ಜಾತಿ ಪರಿಗಣನೆಯಲ್ಲಿ ಜನಾಂಗದ ಒಂದು ಭಾಗಕ್ಕೆ ಮಾತ್ರ ತಾತ್ವಿಕಾಂಶಗಳ ತಿಳಿವಿನ ಹಕ್ಕು ಇದೆ ಎಂಬುದಕ್ಕೆ ಹೊರತಾಗಿ ನಿಲ್ಲುತ್ತದೆ ಇಲ್ಲಿನ ಮುಕ್ತತೆ.

ಗೋರಖನಾಥನ ಕೃತಿಗಳಲ್ಲಿ 'ಸಿದ್ಧಿಸಿದ್ಧಾಂತ ಪದ್ಧತಿ' 'ಯೋಗ ಬೀಜ', 'ಅಮನಸ್ಕಯೋಗ', 'ಗೋರಕ್ಷ ಶತಕ', ಮುಖ್ಯವಾದವು. 'ಗೋರಕ್ಷ ಕಲ್ಪ', 'ಗೋರಕ್ಷ ಗೀತ', 'ಅವಧೂತ ಗೀತಾ', 'ಗೋರಕ್ಷ ಸಂಹಿತಾ' ಮುಂತಾಗಿ ಹಲವು ಕೃತಿಗಳ ಉಲ್ಲೇಖ ದೊರೆಯುತ್ತಿದ್ದರೂ ಲಭ್ಯವಾಗುತ್ತಿರುವವು ಕೆಲವು ಮಾತ್ರ. 'ಸಿದ್ಧಸಿದ್ಧಾಂತ ಪದ್ಧತಿ' 'ಯೋಗಬೀಜ' ಮತ್ತು 'ಅಮನಸ್ಕಯೋಗ' ಕನ್ನಡ ಅನುವಾದ ದೊಂದಿಗೆ ಈ ಹಿಂದೆ ಬಂದಿವೆ.

ಸಂಸ್ಕೃತಕ್ಕೆ ಹೊರತಾದ ಈ ಕೃತಿಗಳಿಗೆ ತೀರ ಭಿನ್ನವಾಗಿ

'ಗೋರಖಬಾನಿ' ಲಭ್ಯವಿದೆ. ಕನ್ನಡದ ಬೆಡಗಿನ ವಚನಗಳಿಗೆ ಹತ್ತಿರ ವಿರುವ ಈ ನುಡಿಗಳಲ್ಲಿ ಗೋರಖನ ಪರಂಪರೆ ಆತನ ನುಡಿಯನ್ನು ಆಡುಮಾತಿನಲ್ಲಿ ಜನದ ನಡುವೆ ಉಳಿಸಿಕೊಳ್ಳುತ್ತ ಬಂದಿರುವುದನ್ನು ತೋರುತ್ತದೆ. ಇವುಗಳಲ್ಲಿ ಪಂಡಿತ ಹೆಸರು ಹೊತ್ತ ಅರೆಬರೆ ಜ್ಞಾನಿ ಗಳನ್ನು ನೇರವಾದ ಮಾತಿನಲ್ಲಿ ಸಂಬೋಧಿಸುತ್ತ ಸತ್ಯದತ್ತ ಮುಖ ಮಾಡಿಕೊಳ್ಳುವಂಥ ಮಾರ್ಗದರ್ಶನ ಇರುವಂತೆಯೇ, ಸಾಮಾನ್ಯರಿಗೆ ತಿಳಿವಂತೆ ಸಾಮಾನ್ಯ ಭಾಷೆಯಲ್ಲಿ ತತ್ವದರ್ಶನಕ್ಕೆಳೆಸುವ ವಿನೂತನ ತೆಯೂ ಇದೆ.

ದೇವಲ ಜಾತ್ರಾ ಸುಂನಿ ಜಾತ್ರಾ, ತೀರಥ ಜಾತ್ರಾ
ಪಾಂಣೀ ।
ಅತೀತ ಜಾತ್ರಾ ಸುಫಲ ಜಾತ್ರಾ ಬೋಲೈ ಅಮೃತ
ಬಾಂಣೀ ॥

—ದೇವಾಲಯದ ಯಾತ್ರೆ ಶೂನ್ಯವಾದದು, ಇದರಿಂದ ಯಾವ ಫಲವೂ ಸಿಗುವುದಿಲ್ಲ. ತೀರ್ಥಯಾತ್ರೆ ನೀರಿನ ಯಾತ್ರೆಯಾಗುತ್ತದೆ, ಅಷ್ಟೆ. ಅತೀತ ಯಾತ್ರೆಯೇ ಸುಫಲವಾದದ್ದು. ಅಮೃತದ ನುಡಿ ಗಳನ್ನು ನುಡಿಯುವವರಲ್ಲಿಗೆ ಯಾತ್ರೆ ಮಾಡಿದಾಗ ಬೇರೆ ಯಾತ್ರೆಗಳಿಗೆ ಹೋಗಬೇಕಾದ ಸಂಭವ ಬರುವುದಿಲ್ಲ—ಇದು ಇಲ್ಲಿನ ಒಂದು ಬಾನಿ.

ಅಧ್ಯಾಯ–೩

ಸಾಮಾಜಿಕ ಪರಿವರ್ತನೆಯಲ್ಲಿನ ಪಾತ್ರ

ಒಂದು : ಆರ್ಯೀಕರಣಕ್ಕೆ ಎದುರು ನಿಂತ ಸಾಂಸ್ಕೃತಿಕ ವ್ಯವಸ್ಥೆ

ಗೋರಖನಾಥನಂಥ ಒಬ್ಬ ಸಂತನು ತನ್ನ ಬಾಳಿನಲ್ಲಿ ಒಳಗೊಂಡಿದ್ದ ಸಾಮಾಜಿಕ ಅಂಶಗಳನ್ನು ಕಂಡಕೊಳ್ಳಲು ಆತನ ಕಾಲದಲ್ಲಿನ ಸಾಮಾಜಿಕತೆಯತ್ತಲೂ ನೋಟ ಹರಿಸಬೇಕಾಗುತ್ತದೆ. ಈ ಹಿಂದೆಯೇ ಸೂಚಿಸಿರುವಂತೆ ಗೋರಖನಾಥ ಯತಿಪರಂಪರೆ ಮತ್ತು ಯೋಗ ಮಾರ್ಗದ ಹಿನ್ನೆಲೆಯಲ್ಲಿ ಬೌದ್ಧಧರ್ಮ ಒಳಗೊಂಡಿದ್ದ ಸಾಮಾಜಿಕ ಜೀವನದ ಸ್ವರೂಪವನ್ನೂ, ಆಧ್ಯಾತ್ಮದ ಆಳದ ನೆಲೆಯನ್ನು ಕೂಡ ಪ್ರತಿನಿಧಿಸುತ್ತಿದ್ದಂಥವನು.

ಆರ್ಯ ನೆಲೆ ಒಂದೆಡೆ ಚಾತುರ್ವರ್ಣ್ಯದ ಚೌಕಟ್ಟನ್ನು ಸಮಾಜದಲ್ಲಿ ರೂಪಿಸುವ ಯತ್ನದ ಜೊತೆಯಲ್ಲಿಯೇ ಸಾಂಸ್ಕೃತಿಕ ನೆಲೆಗಳನ್ನು ಆರ್ಯೀಕರಣಕ್ಕೆ ಒಳಗಾಗಿಸುತ್ತ ಬರುತ್ತಿತ್ತು. ಇದರಿಂದ ಸಮಾಜದಲ್ಲಿನ ತರತಮ ಭಾವ ಹೆಚ್ಚಿಕೊಳ್ಳುತ್ತಲೇ ಬರುತ್ತಿತ್ತು. ಇದನ್ನು ಬುದ್ಧ ಮೊಟ್ಟ ಮೊದಲಿಗೆ ಸಮರ್ಥವಾಗಿಯೇ ಎದುರಿಸಿದ. ಆರ್ಯ

ನೆಲೆಗೆ ಎದುರಾಗಿ ಧರ್ಮದ ಚೌಕಟ್ಟನ್ನೇ ಪಡೆದ ಈತನಿಂದ ಸಂಘಟನೆ ಗೊಂಡ 'ಧರ್ಮ' ಮುಕ್ತತೆಯುನ್ನು ಪಡೆದುಕೊಳ್ಳುವ ಹಲವು ಕಾರಣ ಗಳನ್ನು ಒಳಗೊಂಡಿತ್ತು. "ಉಪನಿಷತ್ತುಗಳ ತತ್ವ ಹಲವು ಯೋಗ್ಯರಿಗೆ ಮಾತ್ರ ಮೀಸಲು. ಆದರೆ ಬುದ್ಧನ ಉಪದೇಶದ ಮುಖ್ಯಲಕ್ಷಣವೆಂದರೆ ಅದು ರಹಸ್ಯಮಯವಾದ ಸತ್ಯಗಳನ್ನು ಒಪ್ಪಿಕೊಳ್ಳದೆ ಸ್ವಾಭಾವಿಕ ಪ್ರವೃತ್ತಿಗಳಿಂದ ತೃಪ್ತರಾಗದ ಎಲ್ಲರಿಗೂ ಅನ್ವಯವಾಗುವಂತಿತ್ತು. ಅದೊಂದು 'ಜಾನಪದ ಧರ್ಮ' ವೆಂದು ವಿವರಿಸುವ ಹಾಗಿತ್ತು- ಅದರ ಸಂದೇಶ ಸಾಮಾನ್ಯ ಮಾನವರಿಗೆ. ಆದ್ದರಿಂದ ಅದು ಮಹತ್ವದ ರೀತಿಯಲ್ಲಿ ಜನಸಾಮಾನ್ಯರ ಉತ್ಕರ್ಷಕ್ಕೆ ಕಾರಣವಾಯಿತು".

(ಭಾರತೀಯ ತತ್ವಶಾಸ್ತ್ರದ ಮೂಲಾಂಶಗಳು ಪು. ೭೯)

ಹಿರಿಯಣ್ಣನವರ ಈ ಮಾತುಗಳಲ್ಲಿ ಬೌದ್ಧಧರ್ಮ ತನ್ನ ಪ್ರಭಾವವನ್ನು ಜನಸಾಮಾನ್ಯರಲ್ಲಿ ಪ್ರಚಲಿತಗೊಳಿಸಿಕೊಂಡಿದ್ದು ಏಕೆ ಎಂಬುದರೊಂದಿಗೇ, ವೈದಿಕ ನೆಲೆ ಸತ್ಯವನ್ನು ರಹಸ್ಯಮಯವಾಗಿ ಇಡುವ ಪ್ರವೃತ್ತಿಯಲ್ಲಿಯೇ ಸಾಮಾಜಿಕ ಜೀವನಕ್ಕೆ ತರತಮ ಭಾವ ವನ್ನು ನೀಡುವ ಗುಣವನ್ನು ಒಳಗೊಂಡಿತ್ತು ಎನ್ನುವುದನ್ನು ವ್ಯಕ್ತ ಗೊಳಿಸುತ್ತದೆ.

ಬುದ್ಧನ ಕಾಲಾನಂತರ ಮೂರು ಶತಮಾನಗಳವರೆಗೆ ವಿನೂತನ ರೀತಿಯ ಉತ್ಕರ್ಷಕ್ಕೆ ಕಾರಣವಾದ ಬೌದ್ಧಧರ್ಮ ಮತ್ತೆ ಮೇಲೆದ್ದ ಆರ್ಯ ನೆಲೆಯ ಎದುರಿನಲ್ಲಿ ತನ್ನ ಸಾಮಾಜಿಕ ಪರಿವರ್ತನೆಯ ಗುಣ ವನ್ನು ಕಳೆದುಕೊಂಡ ಮೇಲೆ ಗೋರಖನಾಥ ಮತ್ತೊಮ್ಮೆ ಆರ್ಯೀ ಕರಣಕ್ಕೆ ಎದುರಾಗಿ ನಿಂತ. ಹೀಗೆ ನಿಲ್ಲುವಾಗ ಗೋರಖನಾಥ ಬುದ್ಧ ನಂತೆ ಹೊಸದೊಂದು ಧರ್ಮವನ್ನು ಹುಟ್ಟು ಹಾಕದೆ ಇಲ್ಲಿನ ಸಾಂಸ್ಕೃತಿಕ ನೆಲೆಗಟ್ಟು ಪಡೆದುಕೊಳ್ಳುತ್ತಿದ್ದ ಧಾರ್ಮಿಕ ಸ್ವರೂಪಕ್ಕೆ ವಿನೂತನತೆ ತಂದ. ಯೋಗ ಮಾರ್ಗವನ್ನು ಹೊಸತನದತ್ತ ಹೊರಳಿಸಿದ.

'ಸಿದ್ಧಸಿದ್ಧಾಂತ ಪದ್ಧತಿ'ಯಲ್ಲಿ ಸಾಂಖ್ಯರಲ್ಲಿನ ಇಪ್ಪತ್ತೈದು ತತ್ವಗಳ ಸೆಲೆಗಳನ್ನೇ ಇಲ್ಲಿ ಯೋಗಮಾರ್ಗದ ಸೆಲೆಗೆ ಗೋರಖನಾಥ ಅಳವಡಿಸಿಕೊಂಡಿದ್ದರೂ ತಾಂತ್ರಿಕ ಸೆಲೆಯ ಶಿವ-ಶಕ್ತಿಯರ ಸೆಲೆಗಟ್ಟಿನ ಸ್ಪರ್ಶವನ್ನು ಕೊಟ್ಟಿರುವಂತೆಯೇ, 'ಮಾಯಾ' ವಾದದ ಕಾಲ್ಪಿಕತೆಗೆ ಶೈವದರ್ಶನದಲ್ಲಿನ 'ಲೀಲಾಸ್ಪರ್ಶ' ವನ್ನು ನೀಡಿದ; ಮುಂದೆ ಯೋಗದ ಸೆಲೆಯನ್ನು ಸ್ಪಷ್ಟತೆಯಲ್ಲಿ ಇಟ್ಟು ಶಾಸ್ತ್ರಾರ್ಥಗಳ ನಿರ್ಮಿತಿಯಲ್ಲಿ ತತ್ವಗಳ ಚರ್ಚೆ ಮಾಡುತ್ತ ಬೌದ್ಧಿಕ ಪ್ರದರ್ಶನದಲ್ಲಿ ಮುಳುಗುತ್ತ 'ಪಂಡಿತ' ರಾಗಿದ್ದವರ ಓದಿಗಾಗಿಯೂ ರಚಿತವಾಗಿರುವಂತೆ ತೋರುವ ಈ ಕೃತಿ ಮುಖ್ಯವಾಗಿ 'ಯೋಗ' ಪ್ರತಿಪಾದನೆ ಮಾಡುವಂಥದು.

ವೇದಾಂತೀ ಬಹುತರ್ಕಕರ್ಕಶಮತಿರ್ಗ್ರಸ್ತಃ
ಪರಂ ಮಾಯಯಾ ।
ಭಾಟ್ಟಾಃ ಕರ್ಮಫಲಾಕುಲಾ ಹತಧಿಯೋ
ದ್ವೈತೇನ ವೈಶೇಷಿಕಾಃ ॥
ಅನ್ಯೇ ಭೇದರತಾ ವಿವಾದವಿಕಲಾಃ ಸತ್ತತ್ತ್ವತೋ
ವಂಚಿತಾ ।
ತಸ್ಮಾತ್ ಸಿದ್ಧಮತಂ ಸ್ವಭಾವಸಮಯಂ ಧೀರಃ
ಸದಾ ಸಂಶ್ರಯೇತ್ ॥೭೪॥

ವೇದಾಂತಿಯು ಕೇವಲ ವೇದಾಂತ ಶಾಸ್ತ್ರವನ್ನು ಓದಿಕೊಂಡು ಸ್ವಾನುಭವ ರಹಿತನಾಗಿ, ಕರ್ಮೋಪಾಸನಾದಿ ಸದುಪಾಯಗಳನ್ನು ತ್ಯಾಗ ಮಾಡಿ ಕೇವಲ ಶಾಬ್ದಿಕ ಜ್ಞಾನದಿಂದಲೇ ದ್ವೈತಖಂಡನಾದಿ ಯುಕ್ತಿಗಳಲ್ಲಿಯೇ ತತ್ಪರನಾಗಿರುವನು. ಅವನ ಬುದ್ಧಿಯು ನಿಧಿಧ್ಯಾಸನಾದಿಗಳಿಂದ ಬಹಿರ್ಮುಖವಾಗಿದೆ. ಆದುದರಿಂದ ಅವನು ಮಾಯೆಯಿಂದ ಗ್ರಸ್ತನಾಗಿರುವನು. ಮಾಯಾಜಾಲದಲ್ಲಿಯೇ ಬಿದ್ದುಹೋಗಿರುವನು. ಭಟ್ಟ ಮತಾನುಯಾಯಿಗಳಾದ ಪೂರ್ವಮೀಮಾಂಸಕರು ಕೇವಲ ಕರ್ಮಫಲಗಳಲ್ಲಿಯೇ ವ್ಯಾಕುಲರಾಗಿರುವರು. ಆದುದರಿಂದ ಅವರಿಗೆ

ಈಶ್ವರೋಪಾಸನೆಗೆ ಸಮಯವೇ ದೊರೆಯುವುದಿಲ್ಲ. ವೈಶೇಷಿಕ ಕಣಾದ ಮತಾನುಯಾಯಿಗಳ ಬುದ್ಧಿಯು ದ್ವೈತದಲ್ಲಿ ಆಗ್ರಹಗೊಂಡಿರುವುದರಿಂದಲೇ ನಷ್ಟವಾಗಿರುವುದು, ಮತ್ತು ಸದಾ ಪರಸ್ಪರ ವಿವಾದದಲ್ಲಿಯೇ ತತ್ಪರವಾಗಿರುವುದು. ಈ ಕಾರಣದಿಂದ ತಾವು ಮುಖ್ಯ ತತ್ವದಿಂದ ವಂಚಿತರಾಗಿದ್ದೇವೆ. ಆದುದರಿಂದ ಧೀರ ಜನರು ಸಿದ್ಧ ಮತವಾದ ಸಮರಸಭಾವವನ್ನೇ ಸ್ವೀಕರಿಸಬೇಕು. ಸಕಲ ದರ್ಶನಗಳನ್ನು ಸಮನ್ವಯಗೊಳಿಸಿ ಅದ್ವೈತ ತತ್ವದಲ್ಲಿಯೇ ತತ್ಪರರಾಗಬೇಕು. ಯಾವಾಗಲೂ ವಾದವಿವಾದಗಳಲ್ಲಿ ಸೇರಿಕೊಳ್ಳದೆಯೇ ಒಂದೇ ದರ್ಶನದಲ್ಲಿ ಪಕ್ಷಪಾತಿಗಳಾಗಿ ತಮ್ಮ ಲಕ್ಷ್ಯವನ್ನು ತಪ್ಪಿಸಿಕೊಳ್ಳಬಾರದು.
(ಸಿದ್ಧಸಿದ್ಧಾಂತ ಪದ್ಧತಿ. ಪು. ೫೯-೬೦, ಅನು : ಕಡಪ ಶಂಭುಶರ್ಮ)

ತನ್ನ ಈ ಮಾತುಗಳಲ್ಲಿ ಗೋರಖನಾಥ ವೈದಿಕ ನೆಲೆಗೆ ಎದುರಾಗಿ ಯೋಗಮಾರ್ಗಕ್ಕೆ ತಾತ್ವಿಕ ಚೌಕಟ್ಟು ನೀಡಿರುವುದನ್ನು ತೋರಿಕೊಳ್ಳುತ್ತಾನೆ ಮತ್ತು ಈ ಗ್ರಂಥದಂಥ ರಚನೆಯೊಂದಿಗೆ, ಇತರೆ ಗ್ರಂಥಗಳ ರಚನೆ ಮಾಡಿರುವುದರ ಹಿಂದೆ ಸಂಸ್ಕೃತ ಅಂದು ಪಡೆದುಕೊಂಡಿದ್ದ ಪ್ರಾಧಾನ್ಯತೆಯನ್ನು ಆಧ್ಯಾತ್ಮ ಕ್ಷೇತ್ರದಲ್ಲಿ ಈತನೂ ತೋರಿಕೊಳ್ಳುವ ಅಗತ್ಯವಿತ್ತು. ಇದು ಗೋರಖನಾಥ ಪ್ರತಿನಿಧಿಸುತ್ತಿದ್ದ ಪರಂಪರೆಗೆ ಅಂದು ಅಗತ್ಯದ ಒತ್ತಡವೂ ಆಗಿತ್ತು. ಗೋರಖ ಸಾಮಾಜಿಕ ಬದುಕಿನತ್ತ ತಾಳಿದ್ದ ಆಸ್ಥೆಯನ್ನು, ಬುದ್ಧ ಜನಭಾಷೆಯಾದ ಪಾಳಿಯಲ್ಲಿ ತನ್ನ ಉಪದೇಶಗಳನ್ನೂ ನೀಡಿದಂತೆ, ತಾನೂ ತೋರಿಕೊಂಡಿರುವುದು 'ಬಾನಿ'ಗಳಲ್ಲಿ. (ಅರ್ಥಾತ್ 'ವಾಣಿ'ಗಳಲ್ಲಿ).

ಮುಂದಿನ ಅಧ್ಯಾಯದಲ್ಲಿ ಇವುಗಳತ್ತ ಒಂದು ಸ್ಥೂಲ ನೋಟ ಹರಿಸುವ ಮುನ್ನ ಗೋರಖನ ವ್ಯಕ್ತಿತ್ವ ಒಳಗೊಂಡಿದ್ದ ಸಾಮಾಜಿಕ ಪಾತ್ರವನ್ನು ಇನ್ನಷ್ಟು ಅರ್ಥೈಸಿಕೊಳ್ಳಬೇಕಿದೆ.

ಧರ್ಮ ಮತ್ತು ರಾಜಕೀಯಗಳನ್ನು ತೀರ ಸೂಕ್ಷ್ಮವಾಗಿ ಹೆಣೆ

ಸುತ್ತ ಆರ್ಯೀಕರಣವಾಗುತ್ತ ಬರುತ್ತಿದ್ದುದನ್ನು ತಳಮಟ್ಟದಿಂದ ಎದುರಿಸಲು ಗೋರಖನಾಥ ಮತ್ತು ನಾಥಪಂಥ ದೇಶದ ಉದ್ದಗಲಕ್ಕೂ ತುಂಬ ಸಮರ್ಥವಾಗಿಯೇ ಕಾರ್ಯಕೈಗೊಂಡಿತ್ತು. ಈ ಹಿಂದೆ ಉದ್ಧೃತಗೊಂಡಿರುವ ಗೋರಖನ ಜೀವಿತದ ಕಥೆಯಲ್ಲಿ ಈತ ಭರ್ತೃಹರಿ ಮತ್ತು ಸ್ತ್ರೀರಾಜ್ಯದಲ್ಲಿ ಮತ್ಸ್ಯೇಂದ್ರ ರಾಜನಾಗಿ ಇದ್ದುದ್ದನ್ನು ಮುರಿದು ರಾಜಪ್ರಭುತ್ವವನ್ನು ಜನತೆಯ ಮೇಲಿನಿಂದ ಸಡಿಲಗೊಳಿಸುವ ಯತ್ನಮಾಡಿದಂತೆಯೇ, ಪಂಜಾಬಿನ 'ಪೂರಣ ಭಗತ್' ನೇಪಾಳ ದಲ್ಲಿಯ ರಾಜನನ್ನು ಪ್ರಭುತ್ವ ಶಕ್ತಿಯಿಂದ ಹೊರತರುವಲ್ಲಿ ಸಫಲ ನಾಗಿದ್ದ. ಇದರಂತೆಯೇ ಜಾಲಂಧರ ಮತ್ತು ಈತನ ಶಿಷ್ಯ ಕಾನಿಫ ಬಂಗಾಲದಲ್ಲಿ ಗೋಪಿಚಂದನನ್ನು ಪ್ರಭುತ್ವದಿಂದ ಹೊರಗೆಳೆದಿದ್ದ. ನಾಥಪಂಥದ ಈ ಕಾರ್ಯಗಳು ಮಾನವ ಬದುಕು ಆರಂಭಿಕ ಕಾಲದಲ್ಲಿ ಒಳಗೊಂಡಿದ್ದ ಸರಳತೆ ಹಾಗೂ ಸಹಜತೆಯ ಸಾಮಾಜಿಕ ಸ್ವರೂಪ ದತ್ತ ಹೊರಳಿಸಲು ಯತ್ನಿಸುತ್ತಿದ್ದುದನ್ನು ತೋರುತ್ತದೆ. ಸಾಮಾಜಿಕ ಬದುಕಿನ ಮೇಲೆ ಪ್ರಭುತ್ವ ತರುವ ಒತ್ತಡ ಅಶೋಕನ ಕಾಲದಲ್ಲಿ ಬೌದ್ಧಧರ್ಮದ ಪ್ರವರ್ಧಮಾನಕ್ಕೆ ಕಾರಣವಾಗಲು ನೆರವಾಗಿತ್ತು ಎಂಬ ದೃಷ್ಟಾಂತವಿದ್ದಂತೆಯೇ, ಅನಂತರದ ಆರ್ಯೀಕರಣದಲ್ಲೂ ಪ್ರಭುತ್ವ ಶಕ್ತಿ ಸೂಕ್ಷ್ಮವಾಗಿಯೇ ತನ್ನ ಪಾತ್ರವನ್ನು ಗೈದದ್ದು ನಾಥ ಪಂಥ ಕಾಯೋನ್ಮುಖವಾಗುವ ಹಿಂದೆಯೇ ನಡೆ ಎಂದು ಇವರಿಗೆ ತಿಳಿದಿತ್ತು.

"ನಾಥ ಸಂಪ್ರದಾಯದ ಅಖಿಲ ಭಾರತೀಯ ಚಳುವಳಿಯಿಂದ, ಆಧ್ಯಾತ್ಮ ದೃಷ್ಟಿಯಿಂದ ಜಾತಿಭೇದ ತೊಡೆದುಹೋಗಿ ಇಡೀ ಭಾರತ ಒಂದಾಗುವ ಶಕ್ಯತೆ ತಲೆದೋರಿತು. ಬಂಗಾಲದಿಂದ ಸಿಂದ್ ಮತ್ತು ಕಾಶ್ಮೀರದಿಂದ ರಾಮೇಶ್ವರದವರೆಗೆ ಈ ಸಂಪ್ರದಾಯ ಪ್ರಭಾವವನ್ನು ಬೀರಿತು. ಅದರ ಜೊತೆಗೆ ಜಾತಿಭೇದದಲ್ಲಿಯ ತೀವ್ರತೆ ಕಡಿಮೆಯಾಗಿ ಸರ್ವಮಾನವ-ಐಕ್ಯ ಸಾಧ್ಯವಿದೆಯೆಂದು ನಾಥ ಸಂಪ್ರದಾಯ ತೋರಿಸಿ

ಕೊಟ್ಟಿತು. ನಾಥ ಸಂಪ್ರದಾಯದ ಈ ಪ್ರಭಾವದ ಪ್ರತಿಧ್ವನಿ ೧೧ನೆಯ ಶತಮಾನದಲ್ಲಿ ಭಾರತ ಪ್ರತ್ಯೇಕ ಪ್ರಾಂತ್ಯದಲ್ಲಿ ನಿಗದಿತವಾಯಿತು. ಈ ಮಾತು ಧಾರ್ಮಿಕ ಚಳುವಳಿಯ ಇತಿಹಾಸದಲ್ಲಿ ದಾಖಲಾಗಿದೆ".

[ಮರ್ಹಾಠೀ ಸಂಸ್ಕೃತಿ (ಕೆಲವು ಸಮಸ್ಯೆಗಳು) ಪುಟ. ೧೯೦, ಶಂ. ಬಾ. ಜೋಷಿ]

ಶಂಬಾ ಇಲ್ಲಿಯೇ ಹೇಳುತ್ತಾರೆ : 'ಎಲ್ಲ ಜಾತಿಗಳನ್ನು ಮುರಿದು ಒಂದು ಮಾಡುವ ಕೆಲಸ ನಾಥ ಸಂಪ್ರದಾಯದವರಿಂದ ನಿರುದ್ದಿಶ್ಯವಾಗಿ ಆಯಿತು".

ಸಮಾಜದಲ್ಲಿನ ಜಾತಿ ಚೌಕಟ್ಟನ್ನು ತೊಡೆಯಲು ನಾಥಪಂಥ ಹೀಗೆ ಕಾರ್ಯೋನ್ಮುಖವಾಗುವಲ್ಲಿ ಗೋರಖನಾಥನದು ಪ್ರಮುಖ ಪಾತ್ರವಾಯಿತು. ಈ ಹಿಂದೆ ತಾಂತ್ರಿಕ ಸಾಧನೆಗಳಲ್ಲಿ ಮುಳುಗಿದ ಹಲವರು ಪ್ರಾಕೃತಿಕ ಶಕ್ತಿಗಳನ್ನು ಸಿದ್ಧಿಗೊಳಿಸಿಕೊಳ್ಳುವ ಕ್ರಿಯೆಯಲ್ಲಿ ತಮ್ಮ ಸಿದ್ಧಿಗಳನ್ನು ಸ್ವೇಚ್ಛೆಯಾಗಿ ಬಳಸಿಕೊಳ್ಳುವುದರಲ್ಲಿ ಆಧ್ಯಾತ್ಮ ಪರಂಪರೆಗೆ ಕಳಂಕ ಹಚ್ಚುವತ್ತ ಹೊರಳಿಕೊಂಡಿದ್ದರು. ಲೋಕದ ಒಳಿತನ್ನು ಮರೆತ ಈ ನಡೆಯೊಂದಿಗೆ ಅಪಹಾಸ್ಯ ಮತ್ತು ಟೀಕೆಗೆ ಗುರಿಯಾಗುವಂಥ, ನೈತಿಕತೆಯನ್ನೇ ಮರೆತ ಬಾಳನ್ನು ವಿರಾಗದ ವೇಷ ತೊಟ್ಟು ಬಹುಪಾಲು ಸಾಧುವೇಷಿಗಳು ಬಾಳುತ್ತಿದ್ದರು. ಗೋರಖ ಇಂಥ ಬಾಳನ್ನು ತೊಡೆಯುವ ಸ್ವರೂಪವನ್ನು ತನ್ನ ಕಾರ್ಯದಲ್ಲಿ ಕೂಡಿಸಿಕೊಂಡಿದ್ದ. ಧರ್ಮ, ಸಂಸ್ಕೃತಿ–ರಾಜಪ್ರಭುತ್ವಗಳಿಗೆ ಹೊರತಾಗಿ, ಇವುಗಳ ಬಗೆಗೆ ಅಂಥ ಸ್ಪಷ್ಟ ತಿಳಿವನ್ನೇ ಹೊಂದಿರದ ಕಾಡ ನಡುವಿನ ಮುಗ್ಧವಾಸಿಗಳಿಗೆ, ಅಲೆಮಾರಿ ಜನಾಂಗಕ್ಕೆ ಸಮಾಜದಲ್ಲಿ ಗೌರವ ಕಂಡುಕೊಳ್ಳುವ ಅವಕಾಶವನ್ನೂ ಗೋರಖನಾಥ ಕಲ್ಪಿಸತೊಡಗಿದ್ದ.

ಇದು ಆತನ ಕಾರ್ಯಕ್ಷೇತ್ರದ ಉತ್ತರ ಭಾಗಕ್ಕಷ್ಟೇ ಸೀಮಿತ

ವಾಗಿರದೆ ದಕ್ಷಿಣದತ್ತಲೂ ವ್ಯಾಪಿಸಿತ್ತು ಎಂಬುದಕ್ಕೆ ಕನ್ನಡ ಜನಪದದಲ್ಲಿನ 'ಕಿನ್ನರಿ ಸಂಪ್ರದಾಯು'ದವರಲ್ಲಿಯೂ ಕಾಣುತ್ತದೆ. "ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸುತ್ತಿನಲ್ಲಿರುವ ಕಿನ್ನರಿ ಜೋಗಿಗಳು ನಾಥಪಂಥಕ್ಕೆ ಸೇರಿದ ಕದಿರಾಮಠ ತಮ್ಮ ಧಾರ್ಮಿಕ ನೆಲೆಯೆಂದೂ ತಮ್ಮ ಜನಾಂಗದ ಧಾರ್ಮಿಕ ಉಪಕೇಂದ್ರಗಳಲ್ಲಿರುವ ಅರುವತ್ತಾರು (ಹನ್ನೆರಡು ?) ಹಿರಿದಾದ ಮಠ ಅದು ಎಂದೂ ಬಣ್ಣಿಸುತ್ತಾರೆ. ಬಳ್ಳಾರಿ ಮತ್ತು ಚಿತ್ರದುರ್ಗದ ಸುತ್ತಿನ ಕಿನ್ನರಿ ಜೋಗಿಗಳು ಹಂಡಿ ಬಣಗನಾಥ ಮಠವನ್ನು ತಮ್ಮ ಮೂಲ ಧಾರ್ಮಿಕ ಕ್ಷೇತ್ರವೆಂದು ಹೆಸರಿಸುತ್ತಾರೆ".

(ಕಿನ್ನರಿ ಸಂಪ್ರದಾಯದ ಕಾವ್ಯಗಳು. ಪುಟ. ೫-೬)

ಇವರು ಹಾಡುವ 'ಅರ್ಜುನ ಜೋಗಿ ಹಾಡು' ವಿನಲ್ಲಿಯೂ ಇವರು ಅರ್ಜುನನಿಗೆ ನಾಥಪಂಥೀಯರ ಬಣ್ಣನೆ ನೀಡುತ್ತಾರೆ; ಇವರ ಈ ಹಾಡಿನಲ್ಲಿ ಗೋರಕ್ಷ ಮತ್ತು ಮತ್ಸ್ಯೇಂದ್ರರು ಮಹಾಭಾರತದೊಳಗೆ ಹೋಗಿ ನಿಲ್ಲುತ್ತಾರೆ.

ಅಯ್ಯ—ನೋಡಿದ ಮಹಾರೂಸಿ
ದೇವಾ ಗೋರಕ್ಸಾನಾತಾನಯ್ಯ
ದೇವಾ—ಮಚ್ಚೆಂದ್ರನಾತಾನಯ್ಯ
ಆದೇ ನರಮನಸ್ಸನ ನೋಡಿ

(ಪುಟ. ೬೭)

ಹಿರೇ ರುಸಿ ಮಚ್ಛೆಂದ್ರರಯ್ಯ
ಗೋರಕ್ಸಾನಾತಾರಯ್ಯ ದೇವಾ
ಅವರಾ ತಮ್ಮಗಳಿಗೆ ಕರದೂನೆ
ಅಯ್ಯ ಬಾರೊಬಾರೋ ರೇವಣಯ್ಯ
ಅಣ್ಣಾ ಕಾಲುಭೈರುವ ಬಾರೊ

ನೀವು ಎರಡಾ ಜssನ ರುಸೀಗಾಳು
ನೀವು ಜೋಗಿ ವ್ಯಾಸಾವ ತಾಳೀ

(ಪುಟ. ೬೯-೭೦)

ಗವಿಯಲ್ಲಿದ್ದ ಋಷಿಗಳು ಅರ್ಜುನನಿಗೆ ಜೋಗಿ ವೇಷ ತೊಡಿಸುವ ಬಣ್ಣನೆಯಲ್ಲಿ ತಮ್ಮ ವೃತ್ತಿ ಮೂಲದ ಮೂಲ ನೆಲೆಯನ್ನೇ ತೋರಿ ಕೊಳ್ಳುವ ಇವರು ನಾಥಪಂಥದಿಂದ ತಮಗೆ ಸಿಕ್ಕಿದ ಮಾನ್ಯತೆಯನ್ನು ತಾವು ಹಾಡುವ ಗೇಯ ಕಥೆಗಳೊಳಗೇ ಹೆಣದು ತೋರುತ್ತಾರೆ ಎನ್ನು ವುದಕ್ಕೆ ಇದು ಒಂದು ದೃಷ್ಟಾಂತ.

ಹೀಗೆಯೇ ಬಂಗಾಲದಲ್ಲಿನ ಬಾವುಲರೂ ನಾಥಪಂಥದ ಹಿನ್ನೆಲೆ ಯನ್ನು ಒಳಗೊಂಡಿದ್ದರು ಎನ್ನುವುದೂ ಐತಿಹಾಸಿಕವಾದುದ್ದೇ ಆಗಿದೆ. ಉತ್ತರ ಭಾರತದ ಹಲವು ಕೆಳವರ್ಗದವರ ನಡುವೆ ಇಂದಿಗೂ ಗೋರಖನಾಥನ ಅಂಕಿತದ ಹಾಡುಗಳು ಪ್ರಚಲಿತದಲ್ಲಿ ಇರುವುದು ಅಂದು ಈ ಜನಕ್ಕೆಲ್ಲ ನಾಥಪಂಥ ಆಪ್ತವಾದದ್ದಾಗಿರುವುದನ್ನು ತೋರುತ್ತದೆ. ಉತ್ತರ ಬಂಗಾಲದ ಹಲವೆಡೆಗಳಲ್ಲಿ ಗೋ-ದೇವನನ್ನು ಸ್ತುತಿಸುವ ಹಾಡುಗಳನ್ನು ವಾರ್ಷಿಕ ಹಬ್ಬದಲ್ಲಿ ಹಾಡುತ್ತಾರೆ. "ನಾಥಪಂಥ ಜಾತಿ ಪಂಥವನ್ನು ಒಪ್ಪಿಕೊಳ್ಳುವುದಿಲ್ಲ" ಎನ್ನುವುದು ಶಂಕರ ಮೊಖಾಶಿಯವರ ಅಭಿಪ್ರಾಯ. ಇದು ದಿಟವೂ ಹೌದು ಎನ್ನುವುದು ನಾಥಪಂಥದ ಪರಂಪರೆಯಲ್ಲಿನ ಮಠಗಳಿಗೆ ಮಹಂತರಾಗಿ ನೇಮಕವಾಗುವ ಸಮಾಜದ ಎಲ್ಲ ವರ್ಗದಿಂದ ಬಂದ ಯೋಗಿಗಳ ದೃಷ್ಟಾಂತದಲ್ಲಿ ಈಗಲೂ ಕಾಣಬರುತ್ತಿದೆ. ಈ ಎಲ್ಲವೂ ಗೋರಖ ನಾಥನಿಂದ ಸಾಧ್ಯವಾದಂಥವು.

ಎರಡು : ಶಾರೀರಿಕ ಧೃಡತೆಗೆ ಮಹತ್ವ

ಗೋರಖನಾಥನಿಂದ ಹೊಸ ರೂಪವನ್ನು ಪಡೆದ ಯೋಗಮಾರ್ಗ

ಶರೀರದ ಧೃಡತೆಗೆ ಹೆಚ್ಚು ಮಹತ್ವ ನೀಡಿದೆ. ಪತಂಜಲಿಯ ಯೋಗ ಮನಸ್ಸನ್ನು ಕೇಂದ್ರವಾಗಿಸಿಕೊಂಡದ್ದಾದರೆ ಇಲ್ಲಿ ಗೋರಖನಿಂದ ಸಂಚಲನಗೊಂಡ 'ಹಠಯೋಗ'ದಲ್ಲಿ ಮನಸ್ಸಿನ ಧೃಡತೆಗೆ ಶರೀರವೂ ಧೃಡತೆಯನ್ನು ಒಳಗೊಂಡಿರಬೇಕು ಎಂಬ ಒತ್ತನ್ನು ಪಡೆದುಕೊಂಡಿತು ಎಂತಲೇ ಪತಂಜಲಿಯಲ್ಲಿ 'ಸ್ಥಿರಸುಖಮಾಸನವ್' ಎಂದಿದ್ದದ್ದು ಇಲ್ಲಿ ಆಸನಗಳ ಪೂರವನ್ನೇ ಶಾರೀರಿಕ ಕ್ರಿಯೆಗಳ ಮೇಲೆ ಹರಿಸುತ್ತ ಪ್ರಾಕೃತಿಕ ಒತ್ತಡಗಳನ್ನೆಲ್ಲ ಎದುರಿಸಿಕೊಳ್ಳುವ ಮಾರ್ಗವನ್ನು ತೆರೆಯಿತು. (ಗೋರಕ್ಷ ಮತ್ತು ಅಲ್ಲಮಪ್ರಭುವಿನ ಪ್ರಕರಣ ಇದನ್ನು ಹೆಚ್ಚು ಸ್ಪಷ್ಟವಾಗಿ ತೋರುತ್ತದೆ. ವಿವರಕ್ಕೆ ಪರಿಶಿಷ್ಟ ನೋಡಿ).

ಶರೀರದ ಒಳರಚನೆಯ ಬಗೆಗೆ ಸ್ಪಷ್ಟ ತಿಳಿವು ಮೂಡಿಸುವುದರೊಂದಿಗೆ ಆರೋಗ್ಯವಂತ ಕಾಯವನ್ನು ಕಾಯ್ದುಕೊಳ್ಳುವ ಮಹತ್ವವನ್ನು ಸಮಾಜಕ್ಕೆ ತೋರಿದ ಗೋರಖನಾಥ ಮೌಢ್ಯವನ್ನು ತೊಡೆಯಲು ಒತ್ತು ಕೊಟ್ಟಂತೆಯೇ ಪ್ರಾಕೃತಿಕ ಶಕ್ತಿಗಳ ಬಗೆಗೆ ಉಪೇಕ್ಷೆ ಮಾಡದೆ ಅನಾದಿಯಿಂದ ಹರಿದು ಬರುತ್ತ ತಿಳಿವಿನ ಸ್ಪಷ್ಟತೆಗೆ ನಿಲುಕದಂತಿದ್ದ ವಿಷಯಗಳ ಬಗೆಗೆ ಆಸ್ಥೆ ಮೂಡಿಸಿದ. 'ಗೋರಕ್ಷ ಸಂಹಿತೆ' ಇದಕ್ಕೆ ದೃಷ್ಟಾಂತವಾದದೆ.

ಮತ್ಸ್ಯೇಂದ್ರನ ಮಗ ಮೀನನಾಥನನ್ನು ಗೋರಕ್ಷ ಬಟ್ಟೆಯಂತೆ ಒಗೆದು ಸಾವಿಗೆ ತಳ್ಳಿ ಮರಳಿ ಜೀವಂತಗೊಳಿಸುವ, ಈ ಹಿಂದೆ ನೀಡಿರುರುವಲ್ಲಿನ ಕಥೆ ಸೈಬಿರಿಯಾದಲ್ಲಿ 'ಶಮಣ' ರಲ್ಲಿಯೂ ಇರುವುದನ್ನು ಮರ್ಸಿಯಾ ಎಲಿಯಾದೆ ತನ್ನ 'ಶಮನಿಸಂ' ಕೃತಿಯಲ್ಲಿ ಹಲವು ವಿವರಗಳಲ್ಲಿ ನೀಡುತ್ತಾನೆ. ಈ ಕ್ರಿಯೆ ಮೇಲುನೋಟಕ್ಕೆ ಸಾವಿನಂತೆ ತೋರಿಕೊಂಡರೂ ಶರೀರ ಶುದ್ಧಿಯದಾಗಿ ಹೊರಳಿಕೊಳ್ಳುವ ಪರಿ 'ಶಮಣ'ರ ನಡುವಿನಲ್ಲಿಯೂ ಇರುವ ಉಲ್ಲೇಖ ನೀಡುವಾಗ ಇದು ಪ್ರಾಚೀನ ಕಾಲದಿಂದ ನಡೆದು ಬರುತ್ತಿದ್ದ ಒಂದು ಅಲೌಕಿಕ ರೀತಿಯ ಕ್ರಿಯಾವಿಧಾನ ಎಂದು ಎಲಿಯಾದೆ ತಿಳಿಸುತ್ತಾನೆ. ಗೋರಖ ತನ್ನ

ಕಾಲದಲ್ಲಿ ಲುಪ್ತವಾಗುತ್ತಿದ್ದ ಇಂಥ ಹಲವು ಪ್ರಾಚೀನ ಬುಡಕಟ್ಟು ಮೂಲದ ವಿದ್ಯೆಗಳ ವಾರಸುದಾರನೂ ಆಗಿ ಈ ಎಲ್ಲವುಗಳ ಶಕ್ತಿಯನ್ನು ಸಮಾಜಮುಖಿಯಾಗಿಸಿದ್ದ.

ಮೂರು : ಜಾತಿ ಮತ್ತು ಸಾಮಾಜಿಕತೆಗೆ ಒತ್ತು

ಧರ್ಮ-ಆಧ್ಯಾತ್ಮ ಎನ್ನುವುವೆಲ್ಲ ಸಾಮಾಜಿಕ ಬದುಕಿಗೆ ತೀರ ಬಿಗುವಿನವಾಗಿ ಜನಮಾನಸವನ್ನು ತಾಕಲಾಟಗಳಿಂದ ಮುಳುಗಿಸು ವುದನ್ನು ತೊಡೆಯುವ ಕಾರ್ಯದಲ್ಲಿ ಇವೆಲ್ಲ ಸಹಜವಾದ ಸರಳತೆ ಯುಮೇ ಎಂಬ ನಂಬಿಕೆಯನ್ನು ಗೋರಖನಾಥ ಹುಟ್ಟಿಸಲಾರಂಭಿಸಿದ. ಶೀಲಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಿದ. ತನ್ನ 'ಬಾನಿ'ಯೊಂದರಲ್ಲಿ—

ಸಹಜ ಶೀಲದ ಗೃಹವೇ ಶರೀರ
ಇಂಥ ಗೃಹಸ್ಥನೇ ಗಂಗೆಯಂಥ ನಿರ್ಮಲ ಜಲ

ಎಂದು ಹೇಳಿದ. ಶರೀರಕ್ಕೆ ಹೊರತಾಗಿ ಬೇರೆ ದೈವವಿಲ್ಲ ಎಂದೂ ಜನದ ಕಣ್ಣು ತೆರೆಸುವತ್ತ ಗಮನಹರಿಸಿದ. ಗೋರಖನಾಥ ಪ್ರತಿ ನಿಧಿಸಿದ ಪರಂಪರೆ ಸಾಮಾಜಿಕ ಬದುಕಿಗೆ ಆಧ್ಯಾತ್ಮವನ್ನು ಅರ್ಥಾತ್ ತಾತ್ವಿಕ ದರ್ಶನದ ಹಕ್ಕನ್ನು ಹೇಗೆ ಮುಕ್ತವಾಗಿ ಇರಿಸಿತ್ತು ಎನ್ನು ವುದನ್ನು ಗೋರಖ ಉಲ್ಲೇಖಿಸುವ ಕಾಲದ ಪ್ರಕಾರವನ್ನು ಒಳಗೊಂಡ 'ಕಾಶ್ಮೀರ ಶೈವ' ಇಂದಿಗೂ ತನ್ನಲ್ಲಿ ಹೇಗೆ ಇರಿಸಿಕೊಂಡಿದೆ ಎನ್ನು ವುದನ್ನು ಈ ಒಂದು ಉಲ್ಲೇಖದಲ್ಲಿ ನೋಡಬಹುದು :

"ವೇದಾಂತವು ಉಪದೇಶವನ್ನು ಒಳ್ಳೆಯ ಗುಣಗಳನ್ನುಳ್ಳ 'ಸ್ಥಿತಿವಂತ' ಬ್ರಾಹ್ಮಣ ಜನರ ಅಭ್ಯಾಸಕ್ಕೆ ಮಾತ್ರ ಹಿಡಿದುಕೊಂಡಿದೆ. ನಿಜವಾಗಿ, ವೇದಾಂತ ಎನ್ನುವುದು ಸನ್ಯಾಸಿಗಳಿಗೆ* ಇತರರಿಗಲ್ಲ

---

*ಮೂಲಕೃತಿಯಲ್ಲಿನ ಅಡಿಟಿಪ್ಪಣಿ ; ಸನ್ಯಾಸಿಗಳು "ವಿರಾಗಿಗಳು" ಪ್ರಾಕೃತಿಕ ಸೆಳೆತಗಳನ್ನೆಲ್ಲ ದೂರಮಾಡಿಕೊಂಡು ತಮ್ಮನ್ನು ಧ್ಯಾನ ಮತ್ತು ಆರಣ್ಯಕ ಉಪ ನಿಷತ್ತುಗಳ ಅಧ್ಯಯನಗಳಲ್ಲಿ ತೊಡಗಿಸಿಕೊಂಡಂಥವರು.

ಎಂದು ಶಂಕರಾಚಾರ್ಯರು ಬಿಗಿ ಹಿಡಿದಿದ್ದಾರೆ. ವೇದಾಂತದ ದೃಷ್ಟಿಕೋನದಿಂದ ಹೆಂಗಸರು ಮತ್ತು ಇತರೆ ಜಾತಿಗಳವರೆಗೆ ವೇದಾಂತ ಪದ್ಧತಿಯ ಅಭ್ಯಾಸದಲ್ಲಿ ಪ್ರವೇಶವಿಲ್ಲ. ಈ ದೃಷ್ಟಿಕೋನಕ್ಕೆ ಹೊರತಾಗಿದೆ ನಮ್ಮ ಕಾಶ್ಮೀರ ಶೈವ. ಈ ಕಾಶ್ಮೀರ ಶೈವ ತನ್ನ ಅದ್ವೈತ ಚಿಂತನೆಯನ್ನು ಗಂಡಸರು ಮತ್ತು ಹೆಂಗಸರು ಮೊದಲಾಗಿ, ಜಾತಿಯ ನಿರ್ಬಂಧವಿಲ್ಲದೆ, ವರ್ಣ, ವರ್ಗದ ಭೇದವಿಲ್ಲದೆ ಯಾರು ಬೇಕಾದರೂ ಅಭ್ಯಾಸ ಮಾಡಬಹುದು".

ಕಾಶ್ಮೀರ್ ಶೈವಿಸಂ ದ ಸೀಕ್ರೇಟ್ ಸುಪ್ರೀಮ್, ಪುಟ. ೧೧೭)

ತಾತ್ವಿಕ ದರ್ಶನವನ್ನು ಹೀಗೆ ಹಲವರಿಗೆ ಮೀಸಲಿಟ್ಟು ಸಮಾಜದಲ್ಲಿ ತರತಮದ ಸೃಷ್ಟಿಗೆ ಹೊರತಾದುದಾಗಿತ್ತು ಗೋರಖನ ಮತ್ತು ಈತನ ಕೇಂದ್ರ ವ್ಯಕ್ತಿತ್ವವನ್ನು ಪಡೆದ ನಾಥಪಂಥ. ಲೋಕಭಾಷೆಯಲ್ಲಿ ಜನಸಾಮಾನ್ಯರಿಗೆ ತಿಳಿವಂತೆಯೇ ತಾತ್ವಿಕ ದರ್ಶನಗಳನ್ನು ಬಿತ್ತರಿಸುವ ಗೋರಖನ ದೂರದೃಷ್ಟಿ ಅನಂತರ ಭಾರತದ ಇತಿಹಾಸದಲ್ಲಿ ಒಂದು ಹೊಸ ಅಲೆಯನ್ನು ಏಳಿಸಲು ಬೀಜಾಂಕುರವಾಯಿತು. ಭಕ್ತಿ ಆಂಧೋಲನ ದೇಶದ ಉದ್ದಗಲಕ್ಕೂ ಹಲವು ಪ್ರಾಂತ್ಯಗಳಲ್ಲಿ, ಅಲ್ಲಲ್ಲಿನ ಭಾಷೆಗಳಲ್ಲಿ ಈ ತತ್ವ ದರ್ಶನದ ಚಿಂತನೆ ನಡೆಸಲು ತೊಡಗಿಕೊಂಡು ಸಂಸ್ಕೃತದ ಮುಂದೆ ತಮ್ಮತನವನ್ನು ತೋರಿಕೊಳ್ಳುವ ಒಳಸ್ಥೈರ್ಯವನ್ನು ತಮ್ಮೊಳಗೆ ತೋರಿಕೊಳ್ಳಲು ಹಲವು ಭಾಷೆಗಳು ಅನಂತರವಲ್ಲಿ ಆರಂಭಿಸಿದವು.

ಅಧ್ಯಾಯ ೪

ಬಾನಿ ಅಥವಾ ನುಡಿಗಳು

'ಗೋರಖಬಾನಿ'ಯಿಂದ ಆಯ್ದ ಕೆಲವು 'ಬಾನಿ' ಅರ್ಥಾತ್ ನುಡಿಗಳನ್ನು ಇಲ್ಲಿ ಸರಳ ಅನುವಾದದೊಂದಿಗೆ ನೀಡಲಾಗಿದೆ.

ಅದೇಷಿ ದೇಷಿಬಾ ದೇಷಿ ಬಿಚಾರಿಬಾ ಅದಿಸಿಟಿ
ರಾಷಿಬಾ ಚೀಯಾ ।
ಪಾತಾಲ ಕೀ ಗಂಗಾ ಬ್ರಹ್ಮಾಂಡ ಚಡಾಇಬಾ, ತಹಾಂ
ಬಿಮಲ ಬಿಮಲ ಜಲ ಪೀಯಾ ॥೨॥

ನೋಡಲಾಗದುದನ್ನು ನೋಡು
ನೋಡಿ ಇದರ ಚಿಂತನೆ ಮಾಡು
ಕಣ್ಣಿಂದ ನೋಡಲಾಗುದದನ್ನು ಚಿತ್ತದಲ್ಲಿರಿಸಿಕೋ
ಪಾತಾಳಗಂಗೆಯನ್ನು ಬ್ರಹ್ಮಾಂಡಕ್ಕೆ ತಾ
ಇಲ್ಲಿ ಈ ನಿರ್ಮಲ ರಸದ ಪಾನ ಮಾಡು.

ವೇದ ನ ಸಾಸ್ತ್ರೇ ಕತೇಬೇ ನ ಕುರಾಂಣೇ ಪುಸ್ತಕೇ ನ
ಬಂನ್ಯಾ ಜಾಈ ।
ತೇ ಪದ ಜಾಂನಾಂ ಬಿರಲಾ ಜೋಗೀ ಔರ್ ದುನೀ ಸಬ
ಧಂಧೈ ಲಾಈ ॥೬॥

ವೇದ ಶಾಸ್ತ್ರಗಳ ಧರ್ಮಗ್ರಂಥ ಪುಸ್ತಕಗಳಲ್ಲಿ
ಕುರಾನು ಮೊದಲಾದ ಗ್ರಂಥಗಳಲ್ಲಿ
ಬ್ರಹ್ಮಪದದ ಬಣ್ಣನೆಯನ್ನು ಓದಲಾಗುವುದಿಲ್ಲ
ಈ ಪದವನ್ನು ಎಲ್ಲೋ ಯೋಗಿಯೊಬ್ಬ ತಿಳಿದಿರುತ್ತಾನೆ
ಉಳಿದ ಜಗತ್ತೆಲ್ಲ ದಂಧೆಯಲ್ಲಿ ಮುಳುಗಿರುತ್ತದೆ.

ಹಸಿಬಾ ಷೇಲಿಬಾ ರಹಿಬಾ ರಂಗ । ಕಾಂಮ ಕ್ರೋಧ ನ ಕರಿಬಾ ಸಂಗ ।
ಹಸಿಬಾ ಷೇಲಿಬಾ ಗಾಯಿಬಾ ಗೀತ ॥ ದಿಢ ಕರಿ ರಾಷಿ ಆಪನಾಂ ಚೇತ ॥

ನಗುತ್ತಿರು ಆಟವಾಡುತ್ತಿರು
ಸಂತೋಷ ತುಂಬಿಕೊಂಡಿರು
ಕಾಮಕ್ರೋಧಗಳ ಸಂಗದೊಂದಿಗೆ ಮಾತ್ರ ಇರಬೇಡ
ನಗು, ಆಟವಾಡು
ಹಾಡನ್ನು ಹಾಡು
ನಿನ್ನ ಚಿತ್ತವನ್ನು ಮಾತ್ರ ದೃಢವಾಗಿರಿಸಿಕೋ

ಕೋಈ ಬಾದಿ ಕೋಈ ಬಿಬಾದೀ ಜೋಗೀ ಕೌಂ ಬಾದ ನ ಕರನಾಂ ।
ಅಠಸಠಿ ತೀರಥ ಸಮುಂದಿ ಸಮಾವೈ ಯೂಂ ಜೋಗಿ ಕೌಂ ಗುರುಮುಷಿ ಜರನಾಂ ॥೧೩॥

ಒಬ್ಬ ವಾದಿ ಮತ್ತೊಬ್ಬ ವಿವಾದಿ
ಯೋಗಿಯೊಂದಿಗೆ ಮಾತ್ರ ವಾದ ಬೇಡ
ಅರವತ್ತೆಂಟು ನದಿತೀರ್ಥಗಳು ಸಮುದ್ರವನ್ನು ಕೂಡುತ್ತವೆ
ಯೋಗಿಯೇ, ಗುರುಮುಖದಲ್ಲಿ ಇಂಥದನ್ನು ತಿಳಿದುಕೋ.

ಪಂಥ ಬಿನ ಚಲಿಬಾ ಅಗನಿ ಬಿನಾ ಜಲಿಬಾ ಅನಿಲ
ತೃಷಾ ಜಹಠಿಯಾ ।
ಸಸಂಬೇದ ಶ್ರೀ(ಗುರು) ಗೋರಕ್ಷ(ನಾಥ) ಕಹಿಯಾ
ಬೂಝ್ಯೋ ಪಂಡಿತ ಪಡಿಯಾ ॥೨೨॥
ದಾರಿಯಿಲ್ಲದೆ ನಡೆಯಲಾಗುವುದಿಲ್ಲ
ಬೆಂಕಿಯಿಲ್ಲದೆ ಉರಿಯುವುದಿಲ್ಲ
ಗಾಳಿಯನ್ನು ಬಳಿಗೊಯ್ದು ಉರಿಸು
ಓದಿದ ಪಂಡಿತರು ಹೇಳಲಾರರಿದನು
ಶ್ರೀಗೋರಕ್ಷ ಸ್ವಾನುಭವದಿಂದ ಹೇಳುತ್ತಾನೆ
ಗಗನೇ ನ ಗೋಪಂತ ತೇಜೇನ ಸೋಷಂತ ಪವನೇನ
ಪೇಲಂತ ಬಾಈ ।
ಮಹೀ ಭಾರೇ ನ ಭಾಜಂತ ಉದಕೇ ನ ಡೂಬಂತ
ಕಹೌ ತೌಕೋ ಪತಿಯಾಈ ॥೨೪॥
ಗುಪ್ತವಾಗಿಡಲಾಗುವುದಿಲ್ಲ ಗಗನವನ್ನು
ಹಿಡಿಯಲಾಗುವುದಿಲ್ಲ ಬೆಂಕಿಯನ್ನು
ಅತ್ತಿತ್ತ ಮೇಲೆ ಏರಿಸಲಾಗುವುದಿಲ್ಲ ಗಾಳಿಯನ್ನು
ಹೊರಲಾಗುವುದಿಲ್ಲ ಭೂಮಿಭಾರವನ್ನು
ಬೀಳಲಾಗುವುದಿಲ್ಲ ನೀರಿನೊಳಗೆ
ತವಮ್ಮಾ, ನನ್ನನ್ನು ನಂಬುವರಾರು ?
ಇದನ್ನೆಲ್ಲಾ ಯಾರಿಗೆ ಹೇಳಲಿ ?
ಬಾಸ ಸಹೇತೀ ಸಬ ಜಗಬಾಸ್ಯಾ, ಸ್ವಾದ ಸಹೇತಾ
ಮೀಠಾ ।
ಸಾಚ ಕಹೂಂ ತೌ ಸತಗುರು ಮಾಂನೈ ರೂಪ ಸಹೇತಾ
ದೀಠಾ ॥೨೫॥
ಸುಗಂಧದಿಂದ ಜಗವೆಲ್ಲ ಸುಗಂಧಮಯವಾಗುವುದು

ರುಚಿಯೂ ಸಿಹಿಯಹಾಗುವುದು
ಈ ಸತ್ಯದ ನಂಬುಗೆ
ಕೇವಲ ಸದ್ಗುರುವಿನಿಂದ ಸಾಧ್ಯವಾಗುವುದು
ಮರೌ ವೇ ಜೋಗೀ ಮರೈ, ಮರಣಾ ಹೈ ಮೀಠಾ ।
ತಿಸ ಮರಣಿ ಮರೌ, ಜಿಸ ಮರಣೀ ಗೋರಷ ಮರಿ
ದೀಠಾ ॥೨೬॥

ಮೃತನಾಗುವೆಯಾದರೆ ಯೋಗಿಯಾಗಿ ಮೃತನಾಗು
ಮೃತ್ಯು ಸಿಹಿಯಹಾಗುವುದು
ಇಂಥ ಮೃತ್ಯುವಿನೊಳು ಮೃತನಾದರೆ
ಈ ಮೃತ್ಯುವಿನೊಳು ಗೋರಖ ಕಾಂಬನು
ಅವಧೂ ನಿದ್ರಾ ಕೈ ಘರಿ ಕಾಲ ಜಂಜಾಲಂ ಅಹಾರ
ಕೈ ಘರಿ ಚೋರಂ ।
ಮೈಥುನ ಕೈ ಘರಿ ಜುರಾ ಗರಾಸೈ ಅರಧ-ಉರಧ ಲೈ
ಜೋರಂ ॥೩೫॥

ನಿದ್ರೆಯಾಸಕ್ತಿಯಿಂದ
ಜೀವ ಕಾಲಜಂಜಾಟದೊಳು ಮುಳುಗುವವನು
ಆಹಾರದಾಸಕ್ತಿಯಿಂದ
ಚೋರ ಹೃದಯದೊಳು ಬಹನು
ಮುಳುಗುವವನು ಮೈಥುನದೊಳು
ಯೋಗಿಯೇ, ಕೆಳ ಬೀಳ್ವ ರೇತಸ್ಸ ಮೇಲ್ಮುಖಿಯನಾಗಿಸು.
ಘರಬಾರೀ ಸೋ ಘರ ಕೀ ಜಾಣೈ । ಬಾಹರೀ
ಜಾತಾ ಭೀತರಿ ಆಣೈ ।
ಸರಬ ನಿರಂತರಿ ಕಟೈ ಮಾಯಾ । ಸೋ ಘರವರೀ
ಕಹಿವ ನಿರಂಜನ ಕೀ ಕಾಯಾ ॥೪೪॥

ಮನೆಯೊಡೆಯ ಮನೆಯನರಿತಿಹನು

ಹೊರಹೋಗುವುದ ತರುವನೊಳಗೆ
ಸದಾ ಕತ್ತರಿಸುವನೆಲ್ಲ ಮಾಯೆಯ
ಇಂಥ ಮನೆಯೊಡೆಯನ ಕರೆಯಿರಿ
ನಿರಂಜನ ಕಾಯುವೆಂದು

ಗಿರಹೀ ಸೋ ಜೋ ಗಿರಹೈ ಕಾಯಾ । ಅಭಿ ಅಂತರಿ ಕೀ ತ್ಯಾಗೈ ಮಾಯಾ ।
ಸಹಜ ಸೀಲ ಕಾ ಘುರೈ ಸರೀರ । ಸೋ ಗಿರಹೀ ಗಂಗಾ ಕಾ ನೀರ ॥೪೫॥

ಯೋಗಿ ಗೃಹಸ್ಥನಲ್ಲ
ಗೃಹಸ್ಥನಾದರೆ ಸ್ವಾಧೀನವಿರಬೇಕು ಕಾಯ
ತ್ಯಜಿಸಬೇಕು ಮಾಯೆಯ ಅಂತಃಕರಣದೊಳು
ಸಹಜ ಶೀಲದ ಗೃಹವೇ ಶರೀರ
ಇಂಥ ಗೃಹಸ್ಥನೇ ಗಂಗೆಯಂಥ ನಿರ್ಮಲಜಲ.

ಯಹು ಮನ ಸಕತೀ ಯಹು ಮನ ಸಿವ । ಯಹು ಮನ ಪಂಚ ತತ್ತ ಕಾ ಜೀವ ।
ಯಹು ಮನ ಲೇ ಜೈ ಉನಮನ ರಹೈ । ತೌ ತೀನಿ ಲೋಕ ಕೀ ಬಾತಾಂ ಕಹೈ ॥೫೦॥

ಈ ಮನವೇ ಶಕ್ತಿ
ಈ ಮನವೇ ಶಿವ
ಈ ಮನವೇ ಪಂಚ ತತ್ವಗಳ ಜೀವ
ಈ ಮನವ ಮೇಲೆತ್ತಿ ಉನ್ಮನಿಯಾಗು
ಮೂರು ಲೋಕದ ಮಾತುಗಳ ಕೇಳಲ್ಲಿ.

ಹಿಂದೂ ಧ್ಯಾವೈ ದೇಹುರಾ ಮುಸಲಮಾನ ಮಸೀತ ।
ಜೋಗೀ ಧ್ಯಾವೈ ಪರಮಪದ ಜಹಾಂ ದೇಹುರಾ ನ ಮಸೀತ ॥೬೮॥

ಧ್ಯಾನಿಸುವನು
ಹಿಂದೂ ದೇವಾಲಯದಲಿ
ಮುಸಲಮಾನ ಮಸೀದೆಯಲಿ
ಧ್ಯಾನಿಸುವನು ಯೋಗಿ ಪರಮಪದವ
ಅಲ್ಲಿ ದೇವಾಲಯವಿರುವುದಿಲ್ಲ.
ಮಸೀದೆಯೂ ಇರುವುದಿಲ್ಲ.

ಗೋರಕ್ಷ ಕಹೈ ಸುಣಹುರೇ ಅವಧೂ ಜಗ ಮ್ಯೆಂ
ಏಸ್ಯೆಂ ರಹಣಾಂ ।
ಆಂಷ್ಯೆ ದೇಷಿಬಾ ಕಾಂನ್ಯೆ ಸುಣಿಬಾ ಮುಂಷಥ್ಯೆ ಕಛೂನ
ಕಹಣಾಂ ॥

ಗೋರಖ ಹೇಳುವನು ಕೇಳು ಯೋಗಿಯೇ
ಜಗದೊಳಗೆ ಹೇಗಿರ ಬೇಕೆಂದರೆ—
ನೋಡಿ ಕೇಳುತ್ತಿರಬೇಕಿಲ್ಲವನೂ
ನೀನು ಮಾತ್ರ ಏನೂ ಹೇಳಬಾರದು.

ದೃಷ್ಟಿ ಅಗ್ರೇ ದೃಷ್ಟಿ ಲುಕಾಇಬಾ ಸುರತಿ ಲುಕಾ ಇಬಾ
ಕಾಂನಾಂ ।
ನಾಸಿಕಾ ಅಗ್ರೇ ಪವನ ಲುಕಾಇಬಾ, ತಬ ರಹಿ ಗಯಾ
ಪದ ನಿರಬಾಂನ ॥೭೫॥

ದೃಷ್ಟಿಯಗ್ರದಲಿ ದೃಷ್ಟಿಯಿಟ್ಟು
ಕೋಣೆಯೊಳಗೆ ಕಿವಿಯನಿಟ್ಟು
ನಾಸಿಕಾಗ್ರದಲಿ ಪವನವಿಟ್ಟು
ನಿರ್ಝರದ ಹಾಡ ಕೇಳಲ್ಲಿ.

ಲಾಬಾ ಮಾರೂಂ ಭೈತಾ ಮಾರೂಂ, ಮಾರೂಂ
ಜಾಗತ ಸೂತಾ ।
ತೀನಿ ಲೋಕ ಭಗಜಾಲ ಪಸಾರ್‍ಯಾ ಕಹಾಂ ಜಾಇಗಾ
ಪೂತಾ ॥೬೬॥

ನಿಂತಿದ್ದರೂ ಮರಣಿಸುವೆ
ಕುಳಿತಿದ್ದರೂ ಮರಣಿಸುವೆ
ಎಚ್ಚರನಾಗಿ ಮಲಗಿದ್ದರೂ ಮರಣಿಸುವೆ
ಮೂರು ಲೋಕಗಳು ಭಗಜಲದೊಳಗೆ ಹರಿಯುತಿವೆ
ಪಾರುಗೊಂಡಿಂದರಿಂದ ಹೋಗುವೆಯೆಲ್ಲಿಗೆ ?

ಯತ್ರಬುದ್ಧಿ ರ್ಮನೋ ನಾಸ್ತಿ ತತ್ತ್ವವಿನ್ನಪರಾ ಕಲಾ ।
ಊಹಾಪ್ರೋಹೌ ನ ಕರ್ತವ್ಯಾ ವಾಚಾ ತತ್ರಕರೋತಿ
ಕಿಮ್ ॥೫೨॥

ಬುದ್ಧಿ ಮನಸ್ಸುಗಳಿರದಲ್ಲಿ
ತತ್ವವಿಲ್ಲ
ಅಪರಾಕಳೆಯುಂಟು
ಊಹಾಪೋಹಗಳ ಮಾಡದಿರು
ಅಲ್ಲಿ ಮಾತೇನು ಮಾಡಬಲ್ಲುದು ?

(ಗೋರಕ್ಷ ವಚನ ಸಂಗ್ರಹದಿಂದ)

ಅನುಬಂಧ

ಒಂದು : ಗೋರಖನಾಥ ಮತ್ತು ಅಲ್ಲಮಪ್ರಭು

ಕನ್ನಡದ ಆಧ್ಯಾತ್ಮ ಕ್ಷೇತ್ರದಲ್ಲಿ ಔನ್ನತ್ಯದ ಸ್ಥಾನ ಪಡೆದಿರುವ ಅಲ್ಲಮಪ್ರಭು ಮತ್ತು ಗೋರಖನಾಥರ ಕುರಿತು ಗೊಂದಲಗಳು ಸೃಷ್ಟಿಗೊಂಡಿವೆ. ಇದಕ್ಕೆ ಮುಖ್ಯ ಕಾರಣ, ಚಾಮರಾಸನ 'ಪ್ರಭುಲಿಂಗಲೀಲೆ'ಯಲ್ಲಿ ಅಲ್ಲಮಪ್ರಭುವು ಗೋರಕ್ಷನನ್ನು ಎದುರಿಸಿದ ಎಂದು ವರ್ಣಿತವಾಗಿರುವ ಪ್ರಸಂಗ.

ಆದರೆ, ಅಲ್ಲಮನ ವಚನಗಳಲ್ಲಿಯೇ ನವನಾಥರ ಉಲ್ಲೇಖಗಳು ಹಲವೆಡೆ ಸಿಗುತ್ತದೆ; 'ನವನಾಥ ಸಿದ್ಧರ ತೊತ್ತಳದುಳಿಯಿತ್ತು' ಎನ್ನುತ್ತಾನೆ ಒಂದು ವಚನದೊಳಗೆ. ಬಸವಣ್ಣನು ತನ್ನೊಂದು ವಚನದಲ್ಲಿ 'ಹೊಗೆ ಗೋಳಕನಾಥನ ಕೊರಳ ಸುತ್ತಿತ್ತು' ಎನ್ನುತ್ತಾನೆ. ಅಲ್ಲಮನ ಕಾಲಕ್ಕಾಗಲೇ ನವನಾಥರ ಕಾರ್ಯದ ಬಿರುಸು ತನ್ನ ಕಾವು ಕಳೆದುಕೊಂಡಿತ್ತು ಎನ್ನುವುದು ಸೂಕ್ಷ್ಮ ನೋಟಕ್ಕೆ ಕಾಣುವಂತಹುದು. ಅಲ್ಲಮನು ನಾಥ ಪರಂಪರೆಯ ಯೋಗಮಾರ್ಗದಲ್ಲಿ ಸಾಧನೆ ಮಾಡಿರುವವನು ಎನ್ನುವುದು ಗೋರಖ ಮತ್ತು ಅಲ್ಲಮರ 'ಬಾನಿ' ಮತ್ತು 'ವಚನ'ಗಳ ಸಾಮ್ಯಗಳಲ್ಲಿ ಕಾಣಬರುತ್ತದೆ.

ಕಾಲದಲ್ಲಿ ಸುಮಾರು ನೂರು ವರ್ಷಗಳ ಅಂತರ ಈ ಇಬ್ಬರ ನಡುವೆ ಇರುವುದು ಇಂದಿನ ಕಾಲದ ಪರಿಶೀಲನೆಯಿಂದ ಕಾಣುತ್ತದೆ.

ಚಾಮರಸ ತನ್ನ ಕಾವ್ಯದ ರಚನೆಗೆ ಆಕರಗಳನ್ನು ಕೂಡಿಸಿಕೊಳ್ಳುವಾಗ ನಾಥ ಪರಂಪರೆಯಲ್ಲಿನ ಗೋರಕ್ಷ ಹೆಸರಿನವನೊಂದಿಗೆ ಅಲ್ಲಮನು ತೋರಿರುವ ಶೂನ್ಯ ತತ್ವವನ್ನು ಬಣ್ಣಿಸಿರುವುದು ಗೋರಖನೆಂದೇ ತಪ್ಪು ಕಲ್ಪನೆಯನ್ನು ಆನಂತರದಲ್ಲಿ ಮೂಡಿಸಲು ಕಾರಣವಾಗಿದೆ. ಅಲ್ಲಮ ಎದುರಿಸುವ ಗೋರಕ್ಷ ವಜ್ರಕಾಯದ ಸಿದ್ಧಿಯಲ್ಲಿ 'ಹಠ ಯೋಗ'ದ ಒಂದು ಮುಖವನ್ನು ತೋರುತ್ತಾನೆ. ಗೋಪಿನಾಥ ಕವಿ ರಾಜರು ಈ ಪ್ರಸಂಗದಲ್ಲಿ ಶೂನ್ಯ ಮತ್ತು ವಜ್ರ ಸಿದ್ಧಿಯ ನೆಲೆ ಯನ್ನು ಕಾಣಬಹುದು ಎಂದು ಹೇಳಿದ್ದಾರೆ.

ಹೀಗೆ ತಾತ್ವಿಕಾಂಶದ ಮಟ್ಟದಲ್ಲಿಯಷ್ಟೇ ಸಂಬಂಧ ಹೊಂದಿರುವ ಗೋರಖ ಮತ್ತು ಅಲ್ಲಮರ ಕಾಲದ ನಡುವಿನ ಅಂತರವನ್ನು ಕಂಡು ಕೊಳ್ಳಲು ಇತರ ಮೂಲಗಳತ್ತಲೂ ಕಣ್ಣಾಡಿಸಿದಾಗ ಕಾಣಬರುವ ಮುಖ್ಯ ಅಂಶಗಳು ಹೀಗಿವೆ :

ಗೋರಖ ಮತ್ಸ್ಯೇಂದ್ರನ ಸಮಕಾಲೀನ ರೇವಣನಾಥ ಅಥವಾ ರೇವಣಸಿದ್ಧ. ಗೋರಖ ಮತ್ಸ್ಯೇಂದ್ರರ ಕಾರ್ಯಕ್ಷೇತ್ರ ಉತ್ತರ ಭಾರತವಾಗಿದ್ದರೆ, ರೇವಣನದು ದಕ್ಷಿಣದಾಗಿತ್ತು. ರೇವಣನ ಮಗ ರುದ್ರಮುನಿ. ಈ ರುದ್ರಮುನಿಯ ಆಶೀರ್ವಾದದಿಂದ ಸೊನ್ನಲಿಗೆ ಯಲ್ಲಿ ಸಿದ್ಧರಾಮ ಜನಿಸಿರುವುದು ಸಾಹಿತ್ಯ ಕೃತಿಗಳ ಹಲವು ರೂಪಗಳು ಸಿದ್ಧಪಡಿಸುತ್ತವೆ. ಸಿದ್ಧರಾಮನ ಸಮಕಾಲೀನರು ಬಸವಣ್ಣ ಮತ್ತು ಅಲ್ಲಮಪ್ರಭು.

ತನ್ನ ತಪಸ್ಸಿನಿಂದ ಸಿದ್ಧನಾಗಿ ಬರುವ ಅಲ್ಲಮಪ್ರಭು ಸೊನ್ನಲಿಗೆ ಯಲ್ಲಿ ಸಿದ್ಧರಾಮನನ್ನು ಭೇಟಿಯಾಗಿ ಆತನ ಅಹಂ ಮುರಿದು ಕಲ್ಯಾಣಕ್ಕೆ ಕರೆತರುತ್ತಾನೆ. ಗೋರಕ್ಷನ ಭೇಟಿ ಆನಂತರದಲ್ಲಿ ಅಲ್ಲಮನ ಜೀವಿತದ ಕೊನೆ ಅವಧಿಯಲ್ಲಿ ಎನ್ನುವುದು ಚಾಮರಸನಲ್ಲಿ ಕಾಣುವಂಥದ್ದು. ಹೀಗೆ ತಲೆಮಾರಿನ ಅಂತರದೊಂದಿಗೆ ಅಲ್ಲಮನಿಂದ ಹಿಂದೆ ನಿಲ್ಲುವ ಗೋರಖ ಕನ್ನಡದಲ್ಲಿ ಲಭ್ಯವಿರುವ ಗೋರಕ್ಷನ 'ವಚನ' ಗಳಲ್ಲಿಯೂ

'ಬಾನಿ' ಗಳಲ್ಲಿನ ಔನ್ನತ್ಯಕ್ಕೆ ಏರದಂಥ ಸಾಧಕನಾಗಿದ್ದಾನೆ. ಗೋರಖನ ಹೆಸರಿನ ಕನ್ನಡದ ವಚನಗಳ 'ಗೋರಕ್ಷ' ಬೇರೆ ಎನ್ನುವುದಕ್ಕೆ ಇದಕ್ಕಿಂತ ಹೆಚ್ಚು ಸ್ಪಷ್ಟತೆಗಳ ಅಗತ್ಯವಿಲ್ಲ.

ಎರಡು : ಯೋಗಿಗಳಲ್ಲಿ ಯೋಗಿ ಗೋರಖನಾಥ

ಗೋರಖನಾಥ ಯೋಗಿಗಳಲ್ಲಿಯೇ ಎತ್ತರದವನು. ಈತನ ಮನಸ್ಸು ವಿಚಲಿತಗೊಳ್ಳದಂಥ ಸ್ಥಿರತೆ ಹೊಂದಿದ್ದುದನ್ನು ಹಲವು ಕಥೆಗಳು ತೋರುತ್ತವೆ. ಇವುಗಳಲ್ಲಿ ಈ ಹಿಂದೆ ಉಲ್ಲೇಖಿಸಿರುವ ಪಂಚಸಿದ್ಧರ ಕಥೆಯ ಮುಂದುವರಿದ ಭಾಗ ಹೀಗಿದೆ :

ಪಂಚ ಸಿದ್ಧರ ಹಿರಿಯಣ್ಣನಾದ ಶಿವ ಸಾಂಸಾರಿಕ ಜೀವನ ನಡೆಸುತ್ತಿರುವಾಗ ಉಳಿದವರೆಲ್ಲ ಬ್ರಹ್ಮಚಾರಿಗಳಾಗಿರುವುದು ಗೌರಿಗೆ ಸರಿ ಕಾಣಲಿಲ್ಲ. ಮದುವೆಯಾಗಿ ಸಂಸಾರಿಗಳಾಗಿರಲು ಆಕೆ ಅವರನ್ನು ಕೇಳಿಕೊಂಡಳು. ಆದರೆ ಅವರು ಒಪ್ಪಲಿಲ್ಲ. ಆಗ ಆಕೆ ತನ್ನ ಚೆಲುವನ್ನು ಪ್ರದರ್ಶಿಸಿ ಸ್ತ್ರೀ ಸಮ್ಮೋಹಕ ಶಕ್ತಿಯನ್ನು ಅವರು ಗಮನಿಸದಿರಲಾರದಂತೆ ಮಾಡಿದಳು. ಎಲ್ಲ ಸಿದ್ಧರೂ ವಿಚಲಿತರಾದರು, ಆದರೆ ಬೇರೆ ಬೇರೆ ಪ್ರಮಾಣಗಳಲ್ಲಿ. ಬಹು ಸುಲಭವಾಗಿ ಸೋತವನು ಮೀನನಾಥ. ಕದಳೀ (ಬಾಳೆ, ರಂಭಾ ಎನ್ನುವುದಕ್ಕೆ ತತ್ಸಮಾಸ. ಇದು ಒಬ್ಬ ಅಪ್ಸರೆಯ ಹೆಸರೂ ಹೌದು) ಸ್ತ್ರೀಯರ ದೊರೆಯಾಗಿ ಹೋಗಬೇಕು ಎನ್ನುವ ಆದೇಶ ಅವನಿಗೆ ಬಂತು. ಹಾಡಿ–ಪಾನನ್ನು ಪಾತಿಕಾ ರಾಜ್ಯಕ್ಕೆ ಹೋಗಿ ಅಲ್ಲಿ ಮಯನಾವತೀ ರಾಣಿಯ ಮನೆಯ ಕುವರೆಲಾಯಲ್ಲಿ ಕೆಲಸಮಾಡಿಕೊಂಡಿರುವಂತೆ ಗೌರಿ ನಿರ್ದೇಶಿಸಿದಳು ; ಇದು ಅತನ ಹೃದಯದಲ್ಲಿ ಹುಟ್ಟಿದ ಭಾವನೆಗೆ ಅನುಗುಣವಾಗಿತ್ತು. ಕಾನು–ಪಾನನ್ನು ಡಾಹುಕಾಕ್ಕೆ ಕಳಿಸಿದಳು ; ಆದರೆ ಅವನ ಅಲ್ಲಿನ ಜೀವನ ದಾಖಲಾಗಿಲ್ಲ. ತನ್ನ ಮಲತಾಯಿಯೊಡನೆ ಸಂಬಂಧ ಬೆಳೆಸು

ವಂತೆ ಕಿರಿಯ ಸಿದ್ಧ ಶಿಶು–ಪಾ ಅಥವಾ ಗಾಭುರಾನ (ಬಹುಶಃ ಚೌರಂಗೀನಾಥ ಇರಬಹುದು) ಮೇಲೆ ಒತ್ತಡ ಬಂದಿತು. ಗೋರಕ್ಷನಾಥನೊಬ್ಬನೇ ಅವಿಚಲಿತನಾಗಿ ನಿಂತ. ತನ್ನ ತಾಯಿಯಾಗಿದ್ದರೆ ಹೇಗೋ ಹಾಗೆ ಗೌರಿಯ ಚೆಲುವನ್ನು ಆತ ಮೆಚ್ಚಿಕೊಂಡಿದ್ದ. ತನ್ನ ಚೆಲುವಿನಿಂದ ಆತನನ್ನು ಮರುಳು ಮಾಡಲಾಗದಿದ್ದರೂ ಗೌರಿ ಅನೇಕ ಕುತಂತ್ರಗಳನ್ನು ಬಳಸಿದಳು; ಹೇಯ ಮಾರ್ಗಗಳನ್ನು ಬಳಸಿದಳು. ಆದರೂ ಸಿದ್ಧನನ್ನು ತನ್ನ ಬಲೆಯಲ್ಲಿ ಹಿಡಿಯುವುದು ಅವಳಿಗಾಗಲಿಲ್ಲ. ಗೋರಕ್ಷ ಅವಳ ಕೋಪಕ್ಕೆ ಗುರಿಯಾಗಬೇಕಾಯಿತು. ಆಗ ತನ್ನ ಹೆಂಡತಿಯ ಕೋಪ ಶಮನಾರ್ಥವಾಗಿ ಶಿವ ಮಧ್ಯೆ ಪ್ರವೇಶಿಸಿ ಗೋರಕ್ಷನು ಒಬ್ಬ ತಪಸ್ವಿನಿ ರಾಜಕುಮಾರಿಯನ್ನು ಮದುವೆಯಾಗುವಂತೆ ಮಾಡಿದ್ದ. ಇರುಳಲ್ಲಿ ರಾಜಕುಮಾರಿ ಮದುವೆಯ ಮಂಚಕ್ಕೆ ಬಂದಾಗ, ತನ್ನ ಗಂಡ ಮಗುವಿನ ರೂಪ ಧರಿಸಿ ತಾಯಿ ಹಾಲಿಗೆ ಅಳುತ್ತಿರುವುದನ್ನು ಕಂಡಳು. ಆಕೆ ಭಂಗಿತಳಾದಳು. ತಾನು ಗಂಡು ಅಲ್ಲ ಹೆಣ್ಣೂ ಅಲ್ಲ ಎಂದು ಗೋರಕ್ಷನು ಹೇಳಿದ. ಒಣ ಕಟ್ಟಿಗೆಯ ತುಂಡಿನ ಹಾಗೆ ತಾನು ಸಂವೇದನೆ ಹಾಗೂ ದೈಹಿಕ ಪ್ರತಿಕ್ರಿಯೆಯಿಂದ ದೂರವಾದವನು ಎಂದು ವಿವರಿಸಿದ. ಆಕೆ ಈ ಪ್ರಹಸನದ ಕರ್ತೃವಾದ ಶಿವನನ್ನು ದೂರಿದಳು. ಗೋರಕ್ಷನಾಥನಿಗೆ ಅವಳನ್ನು ಪೂರ್ಣ ನಿರಾಶೆಗೊಳಿಸುವುದು ಬೇಕಿರಲಿಲ್ಲ. ಆದ್ದರಿಂದ ತನ್ನ ಲಂಗೋಟಿಯನ್ನು ನೀರಲ್ಲಿ ಅದ್ದಿ ಅದನ್ನು ಕುಡಿಯಲು ಆಕೆಗೆ ಹೇಳಿದ. ಆಕೆ ಅದನ್ನು ಕುಡಿದ ಕೆಲವೇ ಗಂಟೆಗಳಲ್ಲಿ ಒಂದು ಗಂಡು ಮಗುವಿಗೆ ಜನ್ಮ ಕೊಟ್ಟಳು. ತನ್ನ ಲಂಗೋಟಿಯಿಂದ ಹುಟ್ಟಿದವನಾದ್ದರಿಂದ ಗೋರಕ್ಷನಾಥ ತನ್ನ ಮಗನಿಗೆ ಕರ್ಪಟಿನಾಥ ಎಂದು ಹೆಸರಿಟ್ಟು, ದೀಕ್ಷೆ ಕೊಟ್ಟ.

ಈ ಕರ್ಪಟಿ ಅಥವಾ ಚರ್ಪಟಿನಾಥನ ರಚನೆಯೇ ಶಂಕರಾಚಾರ್ಯರ ಹೆಸರಿನಲ್ಲಿ ಪ್ರಸಿದ್ಧವಾಗಿರುವ 'ಚರ್ಪಟ ಮಂಜರಿ' ಸ್ತೋತ್ರ ಎಂದು ಹಲವು ವಿದ್ವಾಂಸರ ಅನುಮಾನಗಳಿವೆ.

ಗ್ರಂಥಋಣ

ಕನ್ನಡ

'ಸಿದ್ಧಸಿದ್ಧಾಂತ ಪದ್ಧತಿ' (ಕನ್ನಡ ಅನುವಾದ) ಕಡವ ಶಂಭುಶರ್ಮ ಪ್ರ : ಯೋಗೀಶ್ವರ ಮಠ, ವಿಟ್ಲ, ದ. ಕ. ೧೯೫೭.

'ಯೋಗಬೀಜಂ ಮತ್ತು ಗೋರಕ್ಷ ಸಹಸ್ರನಾಮಸ್ತೋತ್ರಂ' (ಅನುವಾದ ದೊಂದಿಗೆ) ಕಡವ ಶಂಭುಶರ್ಮ, ಪ್ರ : ಕದಲೀಮಠ, ಮಂಗಳೂರು, ೧೯೫೬.

'ನವನಾಥ ಭಕ್ತಿಸಾರ' (ತೃತೀಯ ಆವೃತ್ತಿ) ಲೇ : ಕೃಷ್ಣಾಜಿ ಶ್ರೀಪಾದ ರಾವ್ ಕುಲಕರ್ಣಿ, ಪ್ರ : ಕೆ. ಎಸ್. ಕುಲಕರ್ಣಿ, ಬುಕ್ ಡಿಪೋ, ೧೯೮೭.

'ಅಲ್ಲಮನ ವಚನ ಚಂದ್ರಿಕೆ' ಸಂ: ಎಲ್. ಬಸವರಾಜು, ಪ್ರ: ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ, ಮೂರು ಸಾವಿರ ಮಠ, ಹುಬ್ಬಳ್ಳಿ, ೧೯೮೬. (ದ್ವಿತೀಯ ಆವೃತ್ತಿ)

'ಬಸವೇಶ್ವರ' ಸಂ : ಎ. ಸೀತಾರಾಮಯ್ಯ ಮತ್ತು ಪ್ರೊ. ಜಿ. ವೆಂಕಟ ಸುಬ್ಬಯ್ಯ, ಐ. ಬಿ. ಹೆಚ್. ಪ್ರಕಾಶನ. ೧೯೮೮.

'ಭಾರತೀಯ ತತ್ವಶಾಸ್ತ್ರದ ಮೂಲಾಂಶಗಳು' ಲೇ : ಎಮ್. ಹಿರಿಯಣ್ಣ (ಅನುವಾದ : ಡಾ॥ ಕೆ. ಬಿ. ರಾಮಕೃಷ್ಣರಾವ್) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ೧೯೭೧.

'ಭಾರತೀಯ ತತ್ವಶಾಸ್ತ್ರದ ರೂಪುರೇಖೆಗಳು' ಎಂ. ಹಿರಿಯಣ್ಣ, (ಅನು: ಪ್ರಭುಶಂಕರ) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೩.

'ಬಂಗಾಳಿ ಸಾಹಿತ್ಯ ಚರಿತ್ರೆ' ಸುಕುಮಾರ್ ಸೆನ್, (ಅನು: ವಿ. ಸೀತಾರಾಮಯ್ಯ). ಸಾಹಿತ್ಯ ಅಕಾದೆಮಿ ಪರವಾಗಿ, ಶಾರದಾ ಪ್ರಕಟಣಾಲಯ, ಬೆಂಗಳೂರು, ೧೯೬೬.

'ವಂಗ ಸಾಹಿತ್ಯ ಚರಿತ್ರೆ' ಸ್ವಾಮಿ ಶಂಕರಾನಂದ ಸರಸ್ವತಿ, ಮೈಸೂರು ವಿಶ್ವವಿದ್ಯಾಲಯ, ೧೯೬೧.

'ಮರ್ಹಾಠಿ ಸಂಸ್ಕೃತಿ' (ಕೆಲವು ಸಮಸ್ಯೆಗಳು) ಶಂಬಾ ಜೋಶಿ, ಕನ್ನಡಕ್ಕೆ ಕೀರ್ತಿನಾಥ ಕುರ್ತಕೋಟಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೦.

'ಸಿದ್ಧಸಾಹಿತ್ಯ' ಮ. ಸು. ಕೃಷ್ಣಮೂರ್ತಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ೧೯೮೨.

'ಪ್ರಭುಲಿಂಗ ಲೀಲೆಯ ಸಂಗ್ರಹ' ಸಂ; ಎಂ. ಎಸ್. ಬಸವಲಿಂಗಯ್ಯ ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ, ಮೈಸೂರು. ವಿಶ್ವವಿದ್ಯಾಲಯ, ೧೯೮೫ (ನಾಲ್ಕನೇ ಮುದ್ರಣ)

'ಬಸವಣ್ಣನವರ ಷಟ್‌ಸ್ಥಳದ ವಚನಗಳು' ಸಂ: ಪ್ರೊ. ಬಸವನಾಳ ಶಿವಲಿಂಗಪ್ಪ, ಪ್ರ: ಮೈಸೂರು ಸರಕಾರ ಬಸವೇಶ್ವರ ೮ನೇಯ ಶತಮಾನೋತ್ಸವ ಸಮಿತಿ, ಬೆಂಗಳೂರು. ೧೯೬೮

'ಕಿನ್ನರಿ ಸಂಪ್ರದಾಯದ ಕಾವ್ಯಗಳು' ಸಂ: ಎಂ. ಹಿರಿಯಣ್ಣ, ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ೧೯೭೯

'ಯುಗಯಾತ್ರಿ ಭಾರತೀಯ ಸಂಸ್ಕೃತಿ (ಸಂ. ೪) ಧರ್ಮಗಳು' ಸಂ: ಹರಿದಾಸ ಭಟ್ಟಾಚಾರ್ಯ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೮೮.

'ಮಹಾಯೋಗಿ ರೇವಣನಾಥ' ಲೇ: ವೆಂಕಟೇಶ ಉರ್ಫ ಶ್ರೀಪಾದ ದತ್ತಾತ್ರೇಯ ಯಜಮಾನ, ಪ್ರ: ಆಧ್ಯಾತ್ಮ ಭಂಡಾರ, ಕನ್ನೂರ, ೧೯೮೮.
'ಕನ್ನಡ ನಾಡಿನ ಚರಿತ್ರೆ' ಡಾ॥ ಎಸ್. ಸಿ. ನಂದೀಮಠ, ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಏಳನೆಯ ಮುದ್ರಣ ೧೯೮೪

ಸಂಸ್ಕೃತ

'ಸಿದ್ಧಸಿದ್ಧಾಂತ ಪದ್ಧತಿ' (ಶಂಕರ ಮೊಕಾಶಿ ಪುಣೇಕರ ಅವರಿಂದ ದೊರೆತ ಕೈಬರಹದ ಪ್ರತಿ)
'ಗೋರಕ್ಷ ಸಂಹಿತಾ' (ಪ್ರಥಮ ಭಾಗ) ಸಂ: ಶ್ರೀ ಜನಾರ್ಧನ ಪಾಂಡೇಯ, ಸರಸ್ವತೀ ಭವನ ಗ್ರಂಥಮಾಲಾ, ವಾರಾಣಸಿ, ೧೯೭೬.
'ಘೇರಂಡ ಸಂಹಿತಾ' ಪ್ರ: ಖೇಮರಾಜ ಶ್ರೀ ಕೃಷ್ಣದಾಸ್, ಮುಂಬಯಿ ೧೯೮೮.
'ಗೋರಕ್ಷ ಪದ್ಧತಿ' (ಹಿಂದಿ ಅನುವಾದದೊಂದಿಗೆ) ಶ್ರೀ ಮಹೀಧರ ಶರ್ಮಾ, ಪ್ರ: ಖೇಮರಾಜ ಶ್ರೀ ಕೃಷ್ಣದಾಸ್, ಮುಂಬಯಿ ೧೯೬೨.
'ಹಠಯೋಗ ಪ್ರದೀಪಿಕಾ' ಪ್ರ: ಮೋತಿಲಾಲ್ ಬನಾರಸಿದಾಸ್, ದೆಹಲಿ, ೧೯೮೧.
'ಶಿವಸಂಹಿತಾ' ಪ್ರ: ಸತ್‌ಗುರು ಪಬ್ಲಿಕೇಷನ್, ದೆಹಲಿ.
'ಗೋರಕ್ಷ ಸಿದ್ಧಾಂತ ಸಂಗ್ರಹ' ಸಂ: ಜನಾರ್ಧನ ಶಾಸ್ತ್ರಿ ಪಾಂಡೇಯ. ಸರಸ್ವತೀ ಭವನ ಗ್ರಂಥಮಾಲಾ, ವಾರಾಣಸಿ, ೧೯೭೩.
'ಕಾಲಜ್ಞಾನ ನಿರ್ಣಯ' ಸಂ: ಪಿ. ಸಿ. ಬಾಗಚಿ. (ಮೈಕಲ್ ಮ್ಯಾಗೀ ಅವರ ಇಂಗ್ಲೀಷ್ ಅನುವಾದ ಪ್ರಸಾರದೊಂದಿಗೆ) ಪ್ರ: ಪ್ರಾಚ್ಯ

ಪ್ರಕಾಶನ, ವಾರಾಣಸಿ, ೧೯೮೬.
‘ಶಾಬರ ಚಿಂತಾಮಣಿ’ ಪ್ರ: ಯೋಗಪ್ರಚಾರಣಿ ಸಭಾ, ಗೋರಕ್ಷ ಟಿಲ್ಲಾ, ವಾರಾಣಸಿ.
‘ಶ್ರೀ ತಂತ್ರಾಲೋಕ’ (ಪ್ರಥಮ ಭಾಗ) ಹಿಂದಿ ಭಾಷ್ಯದೊಂದಿಗೆ. ಡಾ. ಪರಮಹಂಸ ಮಿಶ್ರ, ಸಂಪೂರ್ಣಾನಂದ ವಿಶ್ವವಿದ್ಯಾಲಯ ವಾರಾಣಸಿ, ೧೯೯೨.

ಹಿಂದಿ

‘ಗೋರಖಬಾನಿ’ ಸಂ: ಪೀತಾಂಬರದತ್ತ ಬಡಥ್ವಾಲ, ಪ್ರ: ಹಿಂದಿ ಸಾಹಿತ್ಯ ಸಮ್ಮೇಳನ, ಪ್ರಯಾಗ, ೧೯೪೩, (ದ್ವಿತೀಯ ಮುದ್ರಣ).
‘ಬೌದ್ಧ ಅಪಭ್ರಂಶ ಕವಿ ಕೃಷ್ಣಪಾದ’ ಡಾ॥ ನಾಗೇಂದ್ರನಾಥ ಉಪಧ್ಯಾಯ, ಸಂಜಯ ಬುಕ್ ಸೆಂಟರ್, ವಾರಾಣಸಿ, ೧೯೮೯.
‘ಸಿದ್ಧ ಸಾಹಿತ್ಯ’ ಡಾ॥ ಧರ್ಮವೀರ ಭಾರತೀ, ಕಿತಾಬ್ ಮಹಲ್, ಇಲಾಹ್‌ಬಾದ್, ೧೯೮೫, (ತೃತೀಯ ಸಂಸ್ಕರಣ).
‘ನಾಥ ಸಂಪ್ರದಾಯ’ ಹಜಾರಿ ಪ್ರಸಾಧ್ ದ್ವಿವೇದಿ, ಲೋಕ ಭಾರತೀ ಪ್ರಕಾಶನ, ಇಲಾಹಾಬಾದ್, (ತೃತೀಯ ಸಂಸ್ಕರಣ) ೧೯೯೧.
‘ಜ್ಞಾನ-ದೀಪ ಬೋಧ’ ವ್ಯಾಖ್ಯಾನಕಾರರು: ಶ್ರೀ ಯೋಗನಾಥ ಸ್ವಾಮೀ, (ಪ್ರಕಾಶಕರು ಇತರೆ ವಿವರಗಳಿಲ್ಲ ಪ್ರಕಾಶನ ವಾರಾಣಸಿ).
‘ಕಬೀರ ಗ್ರಂಥಾವಲಿ’ (ಟೀಕೆಯೊಂದಿಗೆ) ಡಾ. ಪ್ರಷ್ಮಲಾಲ್ ಸಿಂಹ, ಅಶೋಕ ಪ್ರಕಾಶನ, ದೆಹಲಿ, ೧೯೯೪.
‘ಆಗಮ ಔರ್ ತಂತ್ರಶಾಸ್ತ್ರ’ ಬ್ರಜವಲ್ಲಭ ದ್ವಿವೇದಿ, ಪರಿಮಳ ಪ್ರಕಾಶನ, ದೆಹಲಿ, ೧೯೮೪.

'ನಿಗಮಾಗಮ ಸಂಸ್ಕೃತಿ' ವ್ರಜವಲ್ಲಭ ದ್ವಿವೇದಿ, ವೀರಶೈವ ಅನುಸಂಧಾನ ಸಂಸ್ಥಾನ. ವಾರಾಣಸಿ, ೧೯೭೨.

'ಕವಿರಾಜ ಪ್ರತಿಭಾ' ಸಂ: ಲಕ್ಷ್ಮೀನಾರಾಯಣ ತಿವಾರಿ, ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸಿ, ೧೯೮೭.

'ಭಾರತೀಯ ಸಂಸ್ಕೃತಿ ಔರ್ ಸಾಧನಾ' (ದ್ವಿತೀಯ ಖಂಡ) ಮಹಾಮಹೋಪಾಧ್ಯಾಯ, ಡಾ. ಗೋಪಿನಾಥ ಕವಿರಾಜ. ಬಿಹಾರ ರಾಷ್ಟ್ರಭಾಷಾ ಪರಿಷದ್, ಪಾಟನಾ, ೧೯೬೧.

'ಉತ್ತರೀ ಭಾರತ ಕೀ ಸಂತ ಪರಂಪರಾ' ಪರಶುರಾಮ ಚತುರ್ವೇದಿ ಭಾರತೀ ಭಂಡಾರ, ಪ್ರಯಾಗ, ೧೯೫೪.

ಇಂಗ್ಲೀಷ್

Akshaya Kumar Banerjee, 'PHILOSOPHY OF GORAKHANATH' Motilal Banarasidas, Delhi, 1988.

Farquhar J. N. 'An out line of the Religious Literature of India' Motilal Banarasidas, Delhi.

George Weston Briggs, 'Gorakhnath and the Kanphata Yogis' Motilal Banarasidas, Delhi, 1989.

Ghurye G. S. 'Indian Sadhus' Popular Prakashana Bombay, 1964.

Gopinath Kaviraj, 'Notes On Religion and Philosophy' Ed : Gaurinath Sastri, Sampurnananda Sanskrit Visvavidyalya, Varanasi, 1987.

Mircea Eliade; YOGA : Immortality and freedom. Pantheon Books, New Yark, 1958.
SHAMANISM. " 1951.

Shashibhushan Dasgupta, OBSCURE RELIGIOUS CULTS Firma K. L. Mukhopadhay, Calcutta, 1969.

Shankar Mokhashi Punekar, 'AVADOOTA GITA (ed) Munshiram Manoharlal Publishers, Delhi, 1979.
'Harijan contribution to mediveal Indian' Thought, Prasaranga, Bangalore University, 1991.

Swami Laksman Jee, 'Kashmir Shaivisam: The Secret Supreme, Sri Satguru Publications, Delhi, 1991.

Mark S. G. Dyczkowski, 'The Stanzas on Vibration, Dilip Kumar Publishers, Varanasi, 1994.


ಸಾಮಾಜಿಕ ಚಿಂತನ ಮಾಲೆ